208

ಸಂಸ್ಕೃತ ಕಾವ್ಯಕಥಾಮಾಲೆ-೩

ರಾಜಶೇಖರ ಕವಿ ವಿರಚಿತ

ಕರ್ಪೂರಮಂಜರಿ

(ನಾಟಕದ ಸುಂದರ ಕಥಾರೂಪ)

ಲೇಖಕರು :

ಕೀರ್ತಿಶೇಷ ಕೋ. ನಾ. ಕಾರಂತ

ಸಮಾಜ ಪುಸ್ತಕಾಲಯ, ಶಿವಾಜಿಬೀದಿ, ಧಾರವಾಡ-೧.

ಪ್ರಕಾಶಕರು :
ಮನೋಹರ ಘಾಣೇಕರ, ಬಿ. ಎ., ಬಿ. ಕಾಂ.
ಸಮಾಜ ಪುಸ್ತಕಾಲಯ,
ಧಾರವಾಡ-

ತೃತೀಯ ಮುದ್ರಣ : ೧೯೮೭

ಮುದ್ರಕರು :
ರವೀಂದ್ರ ಘಾಣೇಕರ, ಬಿ. ಎ.. ಎಲ್. ಟಿ.
ಪ್ರತಿಭಾ ಮುದ್ರಣ,
ಧಾರವಾಡ-೧.

೧

ಚಂಪಾ ಎಂಬ ಒಂದು ನಗರವಿತ್ತು. ಅಲ್ಲಿ ಚಂದ್ರಪಾಲನೆಂಬ ಅರಸು ರಾಜ್ಯವಾಳುತ್ತಿದ್ದನು. ಈತನು ರಾಢ, ಕಾಮುಪಾಲ ಮೊದಲಾದ ದೇಶಗಳನ್ನು ಅನಾಯಾಸವಾಗಿ ಗೆದ್ದ ಶೂರ. ವಿಭ್ರಮ-ಲೇಖೆ ಇವನ ರಾಣಿ. ಕಪಿಂಜಲನು ವಿನೋಧದ ಗೆಳೆಯ. ಚಂದ್ರಪಾಲ ಸುಖದಿಂದ ಕಾಲಕಳೆಯುತ್ತಿದ್ದನು.

ಹೀಗಿರಲು ಸರ್ವಜನ ಸುಖಕರವಾದ ಸುಂದರ ವಸಂತಕಾಲ ಬಂದಿತು. ರಾಜರಾಣಿಯರೆಲ್ಲರೂ ವಸಂತದ ಆಗಮನದಿಂದ ಪ್ರಸನ್ನ-ರಾದರು. ಕುಮಾರಿಯರು ಚಳಿಯಿಂದ ಒಡೆಯುವ ತುಟಿಗಳ ಲೇಪನ ಕಾರ್ಯವನ್ನು ಕಡಿಮೆ ಮಾಡಿದರು. ಸುಗಂಧಿ ತೈಲದಿಂದ ತಲೆಗೂದಲಿನ ಶೃಂಗಾರವನ್ನು ಬಿಟ್ಟರು. ಕುಪ್ಪಸದ ಪರಿವೆಯೇ ಉಳಿಯಲಿಲ್ಲ. ಆದುದರಿಂದ ಚಳಿಗಾಲವನ್ನು ಗೆದ್ದು ವಸಂತಕಾಲದ ಒಡ್ಡೋಲಗವಾಯಿತೆಂಬಲ್ಲಿ ಇನಿಸೂ ಸಂದೇಹವಿಲ್ಲ. ಸ್ತ್ರೀ-ಪುರುಷರಿಗೆ ಮೈಗೆ ಗಂಧವನ್ನು ಲೇಪಿಸಿಕೊಳ್ಳಬೇಕೆಂಬ ಹಂಬಲವಾಗತೊಡಗಿದೆ. ಜನರು ನಡುಮನೆಯಲ್ಲಿಯೇ ಮಲಗತೊಡಗಿದ್ದಾರೆ.

ಮಲಯಪರ್ವತದಿಂದ ತಂಗಾಳಿ ಬೀಸತೊಡಗಿತು. ಸಂಪಗೆ ಹೂವು ಹಳದಿ-ಕೆಂಪುಬಣ್ಣದ್ದು ಆಯಿತು. ಸುಂದರವಾದ ಮೊಗ್ಗೆಗಳಿಂದ ಕೂಡಿದ ಮಲ್ಲಿಗೆ ಬಳ್ಳಿಯು ಅರಳಿದ ಹೂವುಗಳಿಂದ ಶೋಭಾಯಮಾನ-ವಾಯಿತು. ಪಲಾಶ ಪುಷ್ಪಗಳು ಬುಡದಲ್ಲಿ ಕಪ್ಪಗೆ ಇದ್ದವು. ಅಗ್ರ-ಭಾಗದಲ್ಲಿ ಭ್ರಮರಗಳು ಕುಳಿತು ಅದರ ರಸವನ್ನು ಸವಿಯುತ್ತಿದ್ದವು.

ವಸಂತಕಾಲ ತರುಣಿಯರಲ್ಲಿ ವಿಲಾಸವನ್ನೂ ಗರ್ವವನ್ನೂ ಉಂಟುಮಾಡುತ್ತದೆ. ಮಲಯಾಚಲದಿಂದ ಬೀಸುವ ಗಾಳಿ, ಲತೆ-

ಗಳೆಂಬ ನರ್ತಕಿಯರನ್ನು ಕುಣಿಸುತ್ತದೆ. ಕೋಗಿಲೆಗಳನ್ನು ಪಂಚಮ ಸ್ವರದಿಂದ ಹಾಡುವಂತೆ ಪ್ರೇರಿಸುತ್ತದೆ. ನಲ್ಲೆಯರಿಗೆ ತಮ್ಮ ನಲ್ಲನ ಮೇಲಿರುವ ಮುನಿಸನ್ನು ದೂರ ಮಾಡುತ್ತದೆ. ರಸಾಂಗನೆಯ ಈ ವಸಂತೋತ್ಸವದ ಕಾಲ; ಬಂಧುಬಾಂಧವರಲ್ಲಿ ಪ್ರೇಮದ ರಸವನ್ನು ಹರಿಸುತ್ತದೆ.

ರಾಜಾ ಚಂದ್ರಪಾಲನು ತನ್ನ ರಾಣಿ ಹಾಗು ಪರಿವಾರದವ-ರೊಂದಿಗೆ ವಸಂತೋತ್ಸವದ ಸವಿಯನ್ನು ಸವಿಯುತ್ತಾ ಇದ್ದನು. ವಸಂತಾಗಮನದಿಂದ ಸಕಲರೂ ಆನಂದಿತರಾದರು. ರಾಜನು ವಸಂತ ಕಾಲವನ್ನು ವರ್ಣಿಸಿ ರಾಣಿಯನ್ನು ಪ್ರಸನ್ನಗೊಳಿಸಿದನು. ರಾಣಿಯೂ ವರ್ಣಿಸಿ ರಾಜನನ್ನು ಪ್ರಸನ್ನಗೊಳಿಸಿದಳು.

“ ಅಭಿಮಾನವನ್ನು ಬಿಡು, ಪ್ರಿಯಜನರನ್ನು ಪ್ರೇಮಪೂರ್ಣ-ವಾದ ದೃಷ್ಟಿಯಿಂದ ನೋಡು, ಈ ಯೌವನದ ಉಬ್ಬು ಕೇವಲ ನಾಲ್ಕೈದು ದಿನಗಳ ವರೆಗೆ ಇರುವುದು ’ ಎಂದು ಕೋಗಿಲೆಯು ಕೂಗಿನ ಮೂಲಕ ಮನ್ಮಥನು ಘೋಷಿಸುವನೋ ಎನ್ನುವಂತೆ ತೋರುತ್ತದೆ. ”—ಎಂದು ರಾಣಿಯು ಬಣ್ಣಿಸಿದಳು.

ವಿಚಕ್ಷಣೆ ಒಬ್ಬ ದಾಸಿ, ಕವಿತೆಯನ್ನು ರಚಿಸುವ ಶಕ್ತಿ ಅವಳಲ್ಲಿ ಇತ್ತು. ವಸಂತಕಾಲದ ವರ್ಣನೆಯ ಪ್ರಸಂಗದಲ್ಲಿ ಕಪಿಂಜಲ ವಿಚಕ್ಷಣೆಯರಲ್ಲಿ ವಿವಾದ ನಡೆಯಿತು. ಕಪಿಂಜಲ ತನ್ನನ್ನು ವಿಶೇಷ ಪಂಡಿತನೆಂದು ತಿಳಿದುಕೊಳ್ಳದಿದ್ದರೂ, ಒಬ್ಬ ಸ್ತ್ರೀಯಿಂದ ಅಪಮಾನಿತ-ನಾಗುವುದನ್ನು ಸಹಿಸಿಕೊಳ್ಳಲಾರ. ಆದ್ದರಿಂದ ಅವನು, “ ನೀನು ಬುದ್ಧಿಗೇಡಿ, ಜಗಳಗಂಟಿ, ಅನ್ಯರ ಮಕ್ಕಳನ್ನು ಅಡ್ಡಹಾದಿಗೆ ಹಚ್ಚುವ-ವಳು, ಸೆರೆ ಕುಡಿದು ಮಾರ್ಗದಲ್ಲಿ ಹೊರಳಾಡುವವಳೆ”ಂದು ಮುಂತಾಗಿ ವಿವಿಧ ರೀತಿಯಿಂದ ಬೈದನು.

" ಕುದುರೆಯ ಓಟದ ವಿಷಯಕ್ಕೆ ಯಾರೂ ಸಾಕ್ಷಿಯನ್ನು ಕೇಳುವುದಿಲ್ಲ, ನೋಡಿ ತಿಳಿಯುತ್ತಾರೆ. ಆದುದರಿಂದ ವಸಂತ ಕಾಲವನ್ನು ವರ್ಣಿಸು. "

" ನೀನು ಪಂಜರದ ಮೈನಾದಂತೆ ಗೊರಗೊರ ಅನ್ನುವಿ. ನಿನಗೇನೂ ತಿಳಿಯದು. ನಾನು ನನ್ನ ಗೆಳೆಯನಾದ ಅರಸ ಹಾಗು ಮಹಾರಾಣಿಯ ಸಮ್ಮುಖದಲ್ಲಿಯೇ ವರ್ಣಿಸುವೆ. ಸಣ್ಣ ಸಣ್ಣ ಹಳ್ಳಿಗಳಲ್ಲಿ ಅಥವಾ ಅಡವಿಯಲ್ಲಿ ಕಸ್ತೂರಿಯನ್ನು ಮಾರುವುದಿಲ್ಲ. ಒರೆಗಲ್ಲನ್ನು ಬಿಟ್ಟು, ಬೇರೆ ಕಲ್ಲಿನ ಮೇಲೆ ಚಿನ್ನವನ್ನು ತಿಕ್ಕಿ ನೋಡುವುದಿಲ್ಲ, "

ರಾಜಾ ಚಂದ್ರಪಾಲನೆಂದನು : " ನಿನ್ನ ಕಥೆಯನ್ನು ಓದು, ನಾವು ಕೇಳುವೆವು. "

" ಸಿಂಧುವಾರ ಗಿಡಗಳು ನಿನಗೆ ಪ್ರಿಯವಾಗಿವೆ. ಯಾಕೆಂದರೆ ಅದರಲ್ಲಿ ಅನ್ನದಂತೆ ಬೆಳ್ಳಗಾದ ಹೂಗಳು ಆಗುತ್ತವೆ. ಎಮ್ಮೆಯ ಕದಡಿದ ಮೊಸರಿನಂತೆ ಸ್ವಚ್ಛವಾದ ' ವಿಚಕಿಲ ' ಹೂಗಳು ಕೂಡ ನನಗೆ ಬಹಳ ಸೇರುತ್ತವೆ " ಎಂದು ಕಪಿಂಜಲ ವರ್ಣಿಸಿದ.

" ನಿನ್ನ ಕವಿತೆ ನಿನ್ನ ಮಡದಿಗೆ ಮಾತ್ರ ಮೆಚ್ಚಿಗೆಯಾಗುತ್ತದೆ " ಎಂದು ವಿಚಕ್ಷಣೆ ಅಣಕಿಸಿದಳು.

" ಸವಿಮಾತಿನವಳೆ, ನೀನು ನಿನ್ನ ಕವಿತೆಯನ್ನು ಓದು " ಎಂದು ಕಪಿಂಜಲನೆಂದನು.

" ನಮ್ಮೆದುರಿಗೆ ನೀನು ಕವಿತೆ ಕಟ್ಟುವ ವಿಷಯದಲ್ಲಿ ಭಾರೀ ಹೆಮ್ಮೆ ಕೊಚ್ಚಿಕೊಳ್ಳುತ್ತಿರುವಿ. ಈಗ ಆರ್ಯಪುತ್ರನೆದುರಿಗೆ ನೀನು ರಚಿಸಿದ ಯಾವುದಾದರೊಂದು ಕವಿತೆಯನ್ನು ಓದು. ಯಾಕೆಂದರೆ,

ಸಭೆಯಲ್ಲಿ ಓದಲಿಕ್ಕೆ ಯೋಗ್ಯವಾದ ಕವಿತೆಯನ್ನೇ ಕವಿತೆಯೆಂದು ಹೇಳುತ್ತಾರೆ " ಎಂದು ರಾಣಿ ಹೇಳಿದಳು.

ವಿಚಕ್ಷಣೆ ಮಹಾರಾಣಿಯ ಅಪ್ಪಣೆಯಂತೆ ಕವಿತೆಯನ್ನು ಓದಿದಳು. ಅರಸನು ಅವಳ ಕವಿತೆಯನ್ನು ಕೇಳಿ ತಲೆದೂಗಿದನು. ವಿಚಕ್ಷಣೆ ನಿಜವಾಗಿಯೂ 'ವಿಚಕ್ಷಣೆ' (ವಿದುಷಿ), ಕವಿಗಳ ಕವಿಯೆಂದು ಕೊಂಡಾಡಿದನು.

"ಈಕೆ ಕವಿಗಳ ಚೂಡಾಮಣಿ" ಎಂದು ರಾಣಿಯೂ ಪ್ರಶಂಸಿಸಿದಳು.

ಕಪಿಂಜಲನು ರಾಣಿಯ ಮಾತು ಕೇಳಿ ಉರಿದೆದ್ದನು. "ಕವಿತಾ ರಚನೆಯಲ್ಲಿ ವಿಚಕ್ಷಣೆ-ಚತುರೆ; ಬ್ರಾಹ್ಮಣ ಕಪಿಂಜಲ ದಡ್ಡನೆಂದು ಸ್ಪಷ್ಟವಾಗಿ ಏಕೆ ಅನ್ನುವುದಿಲ್ಲ" ಎಂದು ಉರಿದು ಆಡಿದನು.

"ಡೊಳ್ಳು ಹೊಟ್ಟೆಯವಳಿಗೆ ಕುಪ್ಪಸ ಶೋಭಿಸುವುದಿಲ್ಲ. ಕುರುಡಿಗೆ ಕಾಡಿಗೆ ಚೆಂದವಾಗುವುದಿಲ್ಲ. ಅದರಂತೆ ನಿನ್ನ ಕವಿತೆಯಲ್ಲಿ ಸುಂದರ ಭಾವಗಳಿಲ್ಲದ ಕಾರಣ, ಅದು ಉತ್ತಮ ಕವಿತೆಯೆಂದು ನಮಗನಿಸುವುದಿಲ್ಲ." ಎಂದು ವಿಚಕ್ಷಣೆ ಎಂದಳು.

"ನಿನ್ನ ಕವಿತೆಯಲ್ಲಿ ಸುಂಧರ ಅರ್ಥವಿದ್ದರೂ ಶಬ್ದಸೌಂದರ್ಯ ಅದರಲ್ಲಿಲ್ಲ. ಬಂಗಾರದ ಉಡಿದಾರದಲ್ಲಿ ಕಬ್ಬಿಣದ ಗೆಜ್ಜೆಗಳಿದ್ದಂತೆ ಆಗಿದೆ. ಆದರೂ ನಿನಗೆ ಕವಿಯೆಂಬ ಮನ್ನಣೆ ದೊರೆತಿದೆ" ಎಂದು ಕಪಿಂಜಲ ಚಾಳಿಸಿ ಹೇಳಿದ.

ಇವರಿಬ್ಬರ ಮಾತಿನ ಜಗಳ ಬೆಳೆಯಿತು. ಅದು ಅಪಶಬ್ದಗಳಿಗೂ ಎಡೆಯನ್ನಿತ್ತಿತು. ನಿನ್ನ ಕಿವಿಯನ್ನು ಹರಿದು ಹಾಕುವೆನೆಂದು ಕಪಿಂಜಲನೆಂದರೆ, ನಿನ್ನ ನಾಲಿಗೆಯನ್ನು ಕೊಯ್ಯುವೆನೆಂದು ವಿಚಕ್ಷಣೆಯೆಂದಳು.

ಚಂದ್ರಪಾಲನು ಕಪಿಂಜಲನೊಡನೆ “ ಈಕೆ ನಿಜವಾಗಿಯೂ ಕವಿಯಿದ್ದಾಳೆ ” ಎಂದನು.

“ ಹಾಗಾದರೆ ನಮ್ಮ ಈ ದಾಸಿ ಹರಿಚಂದ್ರ, ನಂದಿಚಂದ್ರ, ಮೊದಲಾದ ಕವಿಗಳಿಗಿಂತಲೂ ನಿಪುಣೆಯಿರುವಳೆಂದು ಸ್ಪಷ್ಟವಾಗಿ ಏಕೆ ಹೇಳುವುದಿಲ್ಲ ? ” ಎಂದು ಕಪಿಂಜಲ ರೋಷದಿಂದ ಅಂದನು.

ಮತ್ತೆ ಕಪಿಂಜಲ — ವಿಚಕ್ಷಣೆಯರಲ್ಲಿ ಮಾತಿನ ಜಗಳ ಶುರುವಾಯಿತು. “ ನಿನಗೆ ಅರ್ಧಚಂದ್ರ ಪ್ರಯೋಗ ಮಾಡಬೇಕು; ಮುಖದ ಮೇಲೆ ಬಡಿಯಬೇಕು ” ಎಂದು ವಿಚಕ್ಷಣೆಯೆಂದರೆ, “ ದಾಸಿಯ ಮಗಳೆ, ಜಗಳಗಂಟಿ, ಬೀದಿಯಲ್ಲಿ ಪರಪುರುಷರೊಡನೆ ಆಡ್ಡಾಡುವಳೆ, ನನಗೆ ಹೀಗೆ ಅನ್ನುವಿ. ನಿನ್ನ ಕೈಮೂಗುಗಳನ್ನು ಯಾರಾದರೂ ಕತ್ತರಿಸಲಿ ” ಎಂದು ಆತ ರೇಗಿ ನುಡಿದನು.

“ ಕಾಲಿನಿಂದ ಒದೆದು ನಿನ್ನ ಹಲ್ಲನ್ನು ಮುರಿಯುವೆನು, ಕಿವಿ-ಗಳನ್ನು ಹರಿಯುವೆನು ” ಎಂದು ವಿಚಕ್ಷಣೆ ಜರೆದಳು.

“ ಇಲ್ಲಿ ದಾಸಿ ನನ್ನೊಡನೆ ಸ್ಪರ್ಧಿಸುವಳು. ಇಂತಹ ಆಸ್ಥಾನವನ್ನು ಬಿಡುವುದೇ ಒಳ್ಳೆಯದು. ಪತ್ನಿಯ ಸೇವಕನಾಗಿ ಮನೆಯೊಳಗೆ ಇರುವೆ ” ಎಂದು ತುಸು ದೂರ ಸರಿದು ಅಂದನು ಮತ್ತು ಹೊರಟುಹೋದನು.

ಕಪಿಂಜಲನ ಸ್ಥಿತಿಯನ್ನು ಕಂಡು ಎಲ್ಲರೂ ನಕ್ಕರು. ಕಪಿಂಜಲ ನಿಲ್ಲದೆ ಓಲಗದಲ್ಲಿ ಆನಂದವಿಲ್ಲ ಎಂದು ರಾಣಿ ಅಂದಳು. “ ಇವನನ್ನು ಒಲಿಸಲಿಕ್ಕೆ ಹೋದರೆ ಇನ್ನಷ್ಟು ಕಠೋರನಾಗುವನು ” ಎಂದು ವಿಚಕ್ಷಣೆ ತನ್ನ ಅಭಿಪ್ರಾಯವನ್ನು ತಿಳಿಸಿದಳು.

ತುಸು ಸಮಯ ಕಳೆಯಿತು. ಕಪಿಂಜಲ ಲಗುಬಗೆಯಿಂದ ಬಂದು, "ಆಸನ ತನ್ನಿರಿ, ಆಸನ ತನ್ನಿರಿ ಭೈರವಾನಂದ ಬಂದಿರುವನು" ಎಂದು ಅಂದನು.

ತುಸು ಹೊತ್ತಿನ ಮೇಲೆ ಭೈರವಾನಂದ ಬಂದನು. ಅವನಿಗೆ ಮಂತ್ರ ತಿಳಿಯದು, ಶಾಸ್ತ್ರ ತಿಳಿಯದು, ಧ್ಯಾನ ಸಮಾಧಿ ಯಾವುದೂ ತಿಳಿಯದು. ಸೆರೆಗುಡುಕ. ಇದೇ ಅವನ ಕುಲಧರ್ಮ. ಭಿಕ್ಷಾನ್ನವೇ ಅವನ ಭೋಜನ, ಚರ್ಮವೇ ಹಾಸಿಗೆ, ಮಾಂಸವನ್ನು ತಿನ್ನುವನು. ಪರಂಪರೆಯಿಂದ ಬಂದ ಧರ್ಮ ಯಾರಿಗೆ ಪ್ರಿಯವಾಗುವುದಿಲ್ಲ. !

ಅರಸನಿತ್ತ ಆಸನದ ಮೇಲೆ ಭೈರವಾನಂದ ಕುಳಿತನು. "ನಾನೊಂದು ಆಶ್ಚರ್ಯದ ಘಟನೆಯನ್ನು ನೋಡಲು ಬಯಸುವೆ" ಎಂದು ರಾಜನು ಅಂದನು.

"ಚಂದ್ರನನ್ನು ನೆಲದ ಮೇಲೆ ಇಳಿಸಿ ತೋರಿಸಬಲ್ಲೆ. ಗಗನ ಮಾರ್ಗದಲ್ಲಿ ಸೂರ್ಯನ ರಥವನ್ನು ತಡೆಯಬಲ್ಲೆ. ಯಕ್ಷರ, ದೇವತೆಗಳ ಹಾಗು ಸಿದ್ಧರ ಅಂಗನೆಯರನ್ನೂ ಕೂಡ ತಂದು ತೋರಿಸಬಲ್ಲೆ. ಜಗತ್ತಿನಲ್ಲಿ ನನ್ನಿಂದ ಆಗದ ಕೆಲಸ ಯಾವುದೂ ಇಲ್ಲ. ಹೇಳಿರಿ, ಏನು ಮಾಡಬೇಕು ?" ಎಂದು ನುಡಿದನು ಭೈರವಾನಂದನು.

"ಗೆಳೆಯ, ನೀನೆಲ್ಲಿಯಾದರೂ ಉತ್ತಮ. ಕನ್ಯಾರತ್ನವನ್ನು ನೋಡಿರುವೆಯಾ ? ನೋಡಿದ್ದರೆ ತಿಳಿಸು." ರಾಜನು ಕಪಿಂಜಲ–ನೊಡನೆ ಹೇಳಿದನು.

"ವಿದರ್ಭ ದೇಶದಲ್ಲಿ ನಾನೊಂದು ಕನ್ಯಾರತ್ನವನ್ನು ನೋಡಿರುವೆ. ಆಕೆಯನ್ನು ಇಲ್ಲಿಗೆ ಕರೆಸು" — ಎಂದು ಕಪಿಂಜಲ ಭೈರವಾನಂದನೊಡನೆ ಹೇಳಿದನು.

“ ಕರೆಸುವೆನೆಂ ”ದು ಭೈರವಾನಂದನು ಧ್ಯಾನಮಗ್ನನಾದನು. ತುಸು ಹೊತ್ತಿನಲ್ಲಿಯೇ ಆ ಕನ್ಯಾರತ್ನದ ದರ್ಶನ ಎಲ್ಲರಿಗೂ ಆಯಿತು. ಆಕೆ ಆಗತಾನೆ ಸ್ನಾನ ಮಾಡಿದವಳು. ಕಣ್ಣಿನ ಕಾಡಿಗೆ ತೊಳೆದು ಹೋಗಿದೆ. ಆದುದರಿಂದ ಕಣ್ಣುಗಳು ಕೆಂಪಾಗಿವೆ. ಕೈಯಿಂದ ತಲೆಗೂದಲುಗಳನ್ನು ಹಿಡಿದಿದ್ದಳು. ಕೂದಲುಗಳಿಂದ ನೀರ ಹನಿಗಳು ಉದುರುತ್ತಿದ್ದವು. ಮೈಮೇಲೆ ಒಂದೇ ಅರಿವೆಯಿದ್ದಿತು. ಸ್ನಾನ ಮಾಡುವಾಗ ಆಕೆ ತನ್ನ ಆಭರಣಗಳನ್ನು ತೆಗೆದಿಟ್ಟಿದ್ದಳು. ಆದರೂ ವಿಲಾಸಪೂರ್ಣ ಚೇಷ್ಟೆಗಳಿಂದ ಆಕೆಯ ಸೌಂದರ್ಯದಲ್ಲಿ ಕೊರತೆ. ಯೇನೂ ಆಗಿದ್ದಿಲ್ಲ. ಲತೆಯಂತೆ ಸುಕುಮಾರವಾದ ಶರೀರ ಒದ್ದೆ-ಯಾದ ಅರಿವೆಯಿಂದ ಇನ್ನಷ್ಟು ಆಕರ್ಷಕವಾಗಿತ್ತು. ತನ್ನ ನೋಟದಿಂದ ಸೌಂದರ್ಯದ ಮಳೆಗರೆಯುತ್ತಿದ್ದಳು.

ಬಂದ ಕನ್ನೆ ‘ಎಲ್ಲರನ್ನೂ ನೋಡಿದಳು. ಮನದಲ್ಲೇ ಆಲೋಚಿಸ-ತೊಡಗಿದಳು, ‘ ಇವನೊಬ್ಬ ರಾಜ, ಇವಳು ಆತನ ರಾಣಿ. ಇವನು ಯಾವನೊ ಒಬ್ಬ ಯೋಗೀಶ್ವರನಿರಬೇಕು. ಇವರು ಸೇವಕವರ್ಗ-ದವರು. ಸಂಗತಿಯೇನೆಂದು ತಿಳಿಯದು. ಸ್ತ್ರೀಸಹಿತವಾಗಿದ್ದರೂ, ಇವರ ದೃಷ್ಟಿ ನನ್ನ ಕಡೆ ಆದರದಿಂದ ಇದೆ. ’

ರಾಜನು ಆಕೆಯನ್ನು ನೋಡಿ ಮುಗ್ಧನಾದನು. ಕಪಿಂಜಲ ನೊಡನೆ “ ಈಕೆ ನನ್ನನ್ನು ಕುಡಿಗಣ್ಣಿನಿಂದ ನೋಡಿದಾಗ, ಬೆಳುದಿಂಗ-ಳಲ್ಲಿ ಸ್ನಾನ ಮಾಡಿದಂತಾಯಿತು ” ಎಂದನು.

ಆಕೆಯ ಸೌಂದರ್ಯಕ್ಕೆ ಕಪಿಂಜಲನೂ ಮುಗ್ಧನಾದನು. ಇಬ್ಬರೂ ಆಕೆಯ ಸೌಂದರ್ಯವನ್ನು ವರ್ಣಿಸತೊಡಗಿದರು. “ ಸೌಂದರ್ಯವು ಸುವರ್ಣದಂತೆ ಇದೆ. ಕಣ್ಣುಗಳು ಕಿವಿಗಳ ವರೆಗೆ ಬೆಳೆದು ಉದ್ದ-

ವಾಗಿವೆ. ಗಲ್ಲಗಳು ಅರ್ಧಚಂದ್ರನಂತೆ ಸುಂದರವಾಗಿವೆ. ಈಕೆಯನ್ನು ನೋಡಿ ನಾನು ಅತ್ಯಂತ ವ್ಯಾಕುಲಿತನಾಗಿರುವೆ" ಎಂದು ರಾಜ ಅಂದನು.

"ಈಕೆಯ ಸೌಂದರ್ಯ ಹಾದಿಯ ಮೇಲೆ ಬಿದ್ದ ರತ್ನದ ತೆರದಲ್ಲಿ ಎಲ್ಲರನ್ನೂ ತನ್ನೆಡೆಗೆ ಸೆಳೆಯುತ್ತಿದೆ." ಎಂದು ಕಪಿಂಜಲನಕ್ಕು ಅರಸನಿಗೆ ಹೇಳಿದನು.

ರಾಣಿಯ ಆದೇಶದಂತೆ, "ನೀನಾರು, ಬಾ, ಕುಳಿತುಕೊ" ಎಂದು ಕನ್ನೆಯೊಡನೆ ಕಪಿಂಜಲನೆಂದನು.

"ಕುಂತಲ ದೇಶದಲ್ಲಿ ವಿದರ್ಭವೆಂಬ ಒಂದು ನಗರವಿದೆ. ಅಲ್ಲಿ ಜನಪ್ರಿಯನಾದ ವಲ್ಲಭರಾಜನೆಂಬ ಅರಸ. ಅವನ ರಾಣಿಯ ಹೆಸರು ಶಶಿಪ್ರಭೆ. ನಾನು ಅವರ ಮಗಳು" ಎಂದು ಕನ್ಯೆ ಅಂದುದನ್ನು ಕೇಳಿ ರಾಣಿ ವಿಭ್ರಮಲೇಖೆಗೆ ತುಸು ಸೋಜಿಗವೆನಿಸಿತು. ಶಶಿಪ್ರಭೆ ಆಕೆಯ ತಾಯಿಯ ಸೋದರಿ. 'ಶಶಿಪ್ರಭೆಯ ಗರ್ಭದಿಂದಲ್ಲದೆ ಬೇರೆಡೆಯಿಂದ ಇಂತಹ ಸೌಂದರ್ಯದ ಉದಯವಾಗಲು ಸಾಧ್ಯವಿಲ್ಲ.' ಎಂದು ಮನದಲ್ಲೇ ಯೋಚಿಸಿ, "ನೀನು ಕರ್ಪೂರಮಂಜರಿಯೇ?" ಎಂದು ಕೇಳಿದಳು. ಆಗ ಕನ್ಯೆ ನಾಚಿಕೆಯಿಂದ ಮೋರೆಯನ್ನು ಕೆಳಗೆ ಮಾಡಿದಳು.

ರಾಣಿ ಕರ್ಪೂರಮಂಜರಿಯನ್ನು ಆಲಿಂಗಿಸಿದಳು. ಕರ್ಪೂರಮಂಜರಿ ರಾಣಿಯನ್ನು ವಂದಿಸಿದಳು. ಭೈರವಾನಂದನೊಡನೆ "ನಿನ್ನ ದಯೆಯಿಂದ ಈಕೆಯನ್ನು ಕಂಡು ಆನಂದಿತಳಾದೆ. ಹದಿನೈದು ಇಪ್ಪತ್ತು ದಿನಗಳ ವರೆಗೆ ಈಕೆ ಇಲ್ಲಿಯೇ ಇರಲಿ. ಬಳಿಕ ನೀನು ನಿನ್ನ ಧ್ಯಾನ-ವಿಮಾನದಿಂದ ಈಕೆಯನ್ನು ಕರೆದುಕೊಂಡು ಹೋಗು" ಎಂದಳು.

"ಗೆಳೆಯ, ನಾವಿಬ್ಬರು ಇಲ್ಲಿ ಹೊರಗಿನವರು. ಯಾಕೆಂದರೆ ಇವರಿಬ್ಬರು ಅಕ್ಕತಂಗಿಯರು. ಭೈರವಾನಂದ ಇವರಿಬ್ಬರೂ ಕೂಡಿ-

ಕೊಳ್ಳುವಂತೆ ಮಾಡಿದವನು. ಆದ್ದರಿಂದ ಆತನು ಇವರ ಮಾನ್ಯತೆಗೆ ಅರ್ಹನಾಗಿರುವನು. ” ಎಂದು ಕಪಿಂಜಲನು ಅರಸನಿಗೆ ಹೇಳಿದನು.

ರಾಣಿ ತನ್ನ ತಂಗಿ ಕರ್ಪೂರಮಂಜರಿಗೆ ವಸ್ತ್ರಾದಿಗಳನ್ನು ಅಣಿಗೊಳಿಸಲು, ಅಂತಃಪುರಕ್ಕೆ ಹೋಗಲು ಅರಸನೊಡನೆ ಅನುಮತಿ ಬೇಡಿದಳು. ಅಷ್ಟರಲ್ಲಿ ಸಂಜೆಯಾಯಿತು. ಸೂರ್ಯಬಿಂಬ ಎಲ್ಲಿಯೋ ಮಾಯವಾಯಿತು. ಸಂಜೆಯಾದುದರಿಂದ ನಳಿನಿ ವಿರಹಿಣಿಯಂತೆ ಆಯಿತು. ಕಮಲಗಳು ಮುದುಡಿಕೊಂಡ ಕಾರಣ, ವಿರಹಿಣಿ ನಲಿನಿಯ ಕಣ್ಣುಗಳು ಮುಚ್ಚಿದವೋ ಎನ್ನುವಂತೆ ಕಾಣತೊಡಗಿದವು. ಮಂಗಲ ಮೃದಂಗ-ನಾದ ಶುರುವಾಯಿತು. ಸಂಜೆಯಾದುದನ್ನು ತಿಳಿದು, ರಾಜ ಸಂಧ್ಯಾವಂದನೆಗಾಗಿ ತೆರಳಿದನು.

೨

ಕರ್ಪೂರಮಂಜರಿಯನ್ನು ನೋಡಿದಂದಿನಿಂದ ರಾಜನ ಮನಸ್ಸು ಚಂಚಲವಾಗಿ ಉದ್ವಿಗ್ನವಾಯಿತು. ಯಾವಾಗಲೂ ಅವಳನ್ನೇ ನೆನೆಯತೊಡಗಿದ. ಅವಳ ವರ್ಣನೆಯನ್ನು ವಿವಿಧ ರೀತಿಯಿಂದ ಮಾಡತೊಡಗಿದ. ರಾಜನ ಮನದ ಉದ್ವೇಗವನ್ನು ದೂರ ಮಾಡಬೇಕೆಂದು ಪ್ರತೀಹಾರಿ ಯೋಚಿಸಿದ. “ ಮಹಾರಾಜರೆ, ಅರಳಿ ನಲಿಯುತ್ತಿರುವ ಉಪವನದೆಡೆಯನ್ನು ನೋಡಿರಿ. ಈ ವಸಂತಕಾಲ ಕೋಗಿಲೆಗಳನ್ನು ಸುಮಧುರವಾಗಿ ಹಾಡುವಂತೆ ಮಾಡುತ್ತಿದೆ. ಭ್ರಮರಗಳು ಗುಂಜಾರವದಲ್ಲಿ ಒಂದು ಹೊಸ ಮಾಧುರ್ಯವನ್ನು ತುಂಬುತ್ತಿವೆ. ವಿರಹಿಗಳ ಹೃದಯದಲ್ಲಿ ಹೊಸ ಅನುರಾಗವನ್ನು ಹುಟ್ಟಿಸುತ್ತಾ ಇದೆ. ಇಂತಹ ವಸಂತಕಾಲದ ದಿನಗಳು ಬಹಳ ದೀರ್ಘವಾಗಿರುವಂತೆ ಕಾಣುತ್ತಿವೆ. ”

ಪ್ರತೀಹಾರಿಯು ವಸಂತ ವರ್ಣನೆಯುತ್ತ ರಾಜನ ಲಕ್ಷ್ಯ ಹೋ
ಲಿಲ್ಲ. ಅವನು ಕರ್ಪೂರಮಂಜರಿಯ ಚಿಂತೆಯಲ್ಲಿಯೇ ಇದ್ದು,
ಯನ್ನೇ ವರ್ಣಿಸತೊಡಗಿದ. "ಆಸ್ಥಾನದಲ್ಲಿರುವ ಸಖಿಯರನ್ನು
ತನ್ನ ಸೌಂದರ್ಯದಿಂದ ತೃಪ್ತಿಗೊಳಿಸುತ್ತಿದ್ದಳು. ಒನಪು ಒಯ್ಯಾ
ಗಳಿಂದ ಮುಗುಳುನಗೆ ನಗುತ್ತಿದ್ದಳು. ನೋಡುವ ನನ್ನ ಕಂಗಳ
ದನ್ನು ತೃಪ್ತಿಗೊಳಿಸುತ್ತ, ನನ್ನ ಹೃದಯದಲ್ಲಿ ಶೃಂಗಾರರಸವ
ಉದ್ದೀಪಿಸುತ್ತಿದ್ದಳು. ಆ ಚಂಚಲವಾದ ಕಣ್ಣುಗಳನ್ನು ನೋ
ದಂದಿನಿಂದ ನನ್ನ ಮನದಲ್ಲಿಯೇ ಅಕೆ ಇರತೊಡಗಿದಳು. ಅ
ಗುಣಗಳು ಯಾವಾಗಲೂ ನೆನಪಿಗೆ ಬರುತ್ತ ಇವೆ. ಎಲ್ಲೆಡೆಯಲ್ಲಿ
ತಿರುಗುತ್ತಿದ್ದಂತೆ ಕಾಣುತ್ತಾಳೆ. ನನ್ನ ಮಾತನ್ನು ಕೇಳುತ್ತಾಳೆ.
ಸಂಬಂಧಿಸಿದ ಕವಿತೆಯನ್ನು ಬರೆಯುತ್ತಾಳೆ. ಎಂದಿಗೂ ನನ್ನ ಮನಸ
ಹೊರಗೆ ಹೋಗುವುದಿಲ್ಲ. ಯಾರನ್ನಾದರೂ ಅವಳು ತನ್ನ ಕುಡಿ
ನಿಂದ ನೋಡಿದರೆ ಸಾಕು. ಅವರು ಅತ್ಯಂತ ವೇದನೆಯನ್ನು ಅನು
ಬೇಕಾಗುವುದು. ಪೂರ್ಣ ದೃಷ್ಟಿಯಿಂದ ನೋಡಿದರಂತೂ ತೀ
ಅವರು ಈ ಲೋಕವನ್ನು ಬಿಡಬೇಕಾಗುವುದು."

ಹೀಗೆ ರಾಜನು ವಿವಿಧ ರೀತಿಯಿಂದ ಕರ್ಪೂರಮಂಜರಿಯ
ನೆನೆಯುತ್ತಾ, ವರ್ಣಿಸುತ್ತಾ ಮಿತ್ರ ಕಪಿಂಜಲನು ಏಕೆ ತಡಮಾ
ತ್ತಿರುವನೆಂದು ಚಿಂತಿಸತೊಡಗಿದ. ರಾಜನ ಸ್ವರೂಪವು ಮ
ಸರೋವರವನ್ನು ಬಿಟ್ಟುಬಂದ ಹಂಸದಂತೆ ಆಗಿತ್ತು. ಆತ ಉ
ನಾಗಿದ್ದ. ಸೂರ್ಯನ ಕಾವಿನಿಂದ ಬಾಡಿದ ಕಮಲನಾಳದಂತೆ
ಹಗಲಲ್ಲಿ ಉರಿಯುವ ದೀಪದಂತೆ, ಕಾಂತಿಹೀನನಾಗಿ ಬೆಳಗಿನ ಹೊ
ಚಂದ್ರನಂತೆ ನಿಸ್ತೇಜನಾಗಿ ಕುಳಿತನು.

ತುಸು ಹೊತ್ತಿನ ಮೇಲೆ ಕಪಿಂಜಲ, ವಿಚಕ್ಷಣೆಯರು ಬಂದರು. "ಮಹಾರಾಜನಿಗೆ ಜಯವಾಗಲಿ" ಎಂದರು.

"ಪೂಜ್ಯನೆ, ವಿಚಕ್ಷಣೆ ಸಂಧಿ ಮಾಡಿಕೊಳ್ಳಲಿಕ್ಕೆ ಬಂದಿದ್ದಳು. ಸಂಧಿಯಾದ ಬಳಿಕ ಮಾತುಕತೆಯ ಕಾರಣ ಇಷ್ಟು ಹೊತ್ತು ತಡವಾಯಿತು." ಎಂದ ಕಪಿಂಜಲನೆಂದನು.

"ಸಂಧಿಯ ಫಲವೇನು?" ರಾಜನು ಕೇಳಿದನು.

"ನಿನ್ನ ಪ್ರೇಯಸಿ ವಿಚಕ್ಷಣೆಯ ಮೂಲಕ ಒಂದು ಓಲೆಯನ್ನು ಕಳಿಸಿರುವಳು" ಎಂದ ಕಪಿಂಜಲ.

ಆಗ ಕೇದಗೆಯ ಸುವಾಸನೆ ಬರತೊಡಗಿತು. ಕರ್ಪೂರಮಂಜರಿ ಕೇದಗೆಯ ಪತ್ರದಲ್ಲಿಯೇ ಏನನ್ನೋ ಬರೆದು ಕಳಿಸಿರುವಳು. ವಸಂತ ಋತುವಿನಲ್ಲಿ ಕೇದಗೆಯ ಹೂ ಹೇಗೆ ಆಯಿತೆಂದು ಅರಸ ಕೇಳತೊಡಗಿದ. ಭೈರವಾನಂದನ ಮಂತ್ರದ ಪ್ರಭಾವದಿಂದ, ಮಹಾರಾಣಿಯ ಉಪವನದ ಕೇದಗೆಯ ಗಿಡದಲ್ಲಿ ಒಂದು ಕೇದಗೆಯ ಹೂವಾಯಿತೆಂದು ವಿಚಕ್ಷಣೆಯ ಮೂಲಕ ಮಹಾರಾಜನಿಗೆ ತಿಳಿಯಿತು.

ಕೇದಗೆಯ ಪತ್ರದಲ್ಲಿ ಕರ್ಪೂರಮಂಜರಿ ಕಸ್ತೂರಿಯ ಶಾಯಿಯಿಂದ ಎರಡು ಶ್ಲೋಕಗಳನ್ನು ಬರೆದು, ಆ ಕೇದಗೆಯ ಪತ್ರವನ್ನು ಮಹಾರಾಜನಿಗೆ ಕಾಣಿಕೆಯೆಂದು ಕಳಿಸಿದ್ದಳು. ಮಹಾರಾಜ ಅದನ್ನು ಓದತೊಡಗಿದನು. ಪೂರ್ಣವಾಗಿ ಓದಿದ. ಎರಡು ಮೂರು ಸಲ ಓದಿದ. ಅದು ಅವನಿಗೆ ವಿರಹ-ವೇದನೆಯನ್ನು ಶಾಂತಗೊಳಿಸುವ ಔಷಧಿಯಾಯಿತು.

ವಿಚಕ್ಷಣೆಯೂ ಕೂಡ ಕರ್ಪೂರಮಂಜರಿಯ ವಿರಹಾವಸ್ಥೆಯನ್ನು ಕುರಿತು ಶ್ಲೋಕವನ್ನು ರಚಿಸಿರುವಳು. ಮಹಾರಾಜನು ಅದನ್ನು ಓದಿದನು. ಸುಲಕ್ಷಣೆಯೂ ರಚಿಸಿರುವಳು. ಅದನ್ನೂ ಓದಿದನು.

ಓದಿ ಮಹಾರಾಜನ ಸಂತಾಪ ಹೆಚ್ಚಾಯಿತು. ನಿಟ್ಟುಸಿರನ್ನು ಬಿಟ್ಟನು. ಈ ದೃಶ್ಯವನ್ನು ನೋಡಿದ ಕಪಿಂಜಲನಿಗೆ ಮಹಾರಾಜನ ಸ್ಥಿತಿಯನ್ನು ಉಚಿತ ಶಬ್ದಗಳಿಂದ ತಿಳಿಸಬೇಕೆಂಬ ಮನವಾಯಿತು. “ಆ ಕಮಲ ಮುಖಿಯನ್ನು ನೋಡಿದಂದಿನಿಂದ ನಿನಗೆ ಬೆಳದಿಂಗಳು ಬಿಸಿಯೆನಿಸ-ತೊಡಗಿದೆ. ಗಂಧದ ಲೇಪನ ವಿಷದಂತೆ ಕಟುವಾಗತೊಡಗಿದೆ. ರಾತ್ರಿಯ ಹೊತ್ತಿನಲ್ಲಿ ಬೀಸುವ ಗಾಳಿ ನಿನ್ನ ಶರೀರವನ್ನು ಸುಡತೊಡ-ಗಿದೆ” ಎಂದು ವರ್ಣಿಸಿದನು.

ಮಹಾರಾಜನಿಗೆ ಬಹಳ ಆನಂದವಾಯಿತು. “ನಿನಗೆ ಪಾರಿ-ತೋಷಕ ಸಿಗುವುದು. ಕರ್ಪೂರಮಂಜರಿಯ ಸುದ್ದಿಯನ್ನು ಏನಾ-ದರೂ ಹೇಳು. ಮಹಾರಾಣಿ ಆಕೆಯನ್ನು ಅಂತಃಪುರಕ್ಕೆ ಕರೆದು-ಕೊಂಡು ಹೋಗಿ ಏನು ಮಾಡಿದಳು?” ಎಂದು ಮಹಾರಾಜನು ಕೇಳತೊಡಗಿದ.

“ಮಹಾರಾಣಿ ಅವಳಿಗೆ ಅಲಂಕಾರವನ್ನು ಮಾಡಿದಳು. ತಿಲಕ ವಿಟ್ಟು, ಸುಂದರ ವಸ್ತ್ರಗಳನ್ನು ತೊಡಿಸಿ ಪ್ರಸನ್ನಗೊಳಿಸಿದಳು.” ಎಂದು ವಿಚಕ್ಷಣೆ ಅಂದಳು. “ಹೇಗೆ?”

“ಗೆಳತಿಯರು ಅವಳ ಕಾಲಿಗೆ ಮರಕತದ ನೂಪುರಗಳನ್ನು ತೊಡಿಸಿದರು. ಹಸಿರು ಬಣ್ಣದ ವಸ್ತ್ರಗಳನ್ನು ತೊಡಿಸಿದರು. ಪದ್ಮ-ರಾಗ ಮಣಿಗಳನ್ನು ಪೋಣಿಸಿದ ನಡುಪಟ್ಟಿಯನ್ನು ತೊಡಿಸಿದರು. ಕೈಗಳಿಗೆ ಬಳೆಗಳನ್ನಿಡಿಸಿದರು. ಸುಂದರ ಮುತ್ತಿನ ಸರವನ್ನು ಕೊರಳಿಗೆ ಹಾಕಿದರು. ಕಿವಿಗೆ ರತ್ನಖಚಿತ ಕುಂಡಲಗಳನ್ನು ತೊಡಿಸಿದರು. ಕಣ್ಣುಗಳಿಗೆ ಕಾಡಿಗೆಯನ್ನು ಹಚ್ಚಲಾಯಿತು. ಹಣೆಯ ಮೇಲೆ ಓಲಾಡುವ ಗುಂಗುರು ಕೂದಲುಗಳನ್ನು ಶೃಂಗರಿಸಿ, ತಲೆದುರುಬನ್ನು ಹೂಗಳಿಂದ ಅಲಂಕರಿಸಿದರು. ಹೀಗೆ ಮಹಾರಾಣಿ ತನ್ನ ಇಚ್ಛೆಗನುಸಾರ-

ವಾಗಿ ಕರ್ಪೂರಮಂಜರಿಯನ್ನು ವಿವಿಧ ಅಲಂಕಾರಗಳಿಂದ ಅಲಂಕರಿಸಿ. ದಳು" ಎಂದು ವಿಚಕ್ಷಣೆ ಹೇಳಿದಳು.

ಆಗ ಅರಸನಿಗೆ ಕ್ರೀಡೋದ್ಯಾನದ ಭೂಮಿಯನ್ನು ವಸಂತ ಋತುವಿನ ಸೌಂದರ್ಯವು ಅಲಂಕರಿಸಿದಂತೆ ಕಂಡಿತು. ವಸ್ತುತಃ ಸ್ವಾಭಾವಿಕವಾಗಿ ಸುಂದರಿಯಾದವಳಿಗೆ ಅಲಂಕಾರಗಳ ಆವಶ್ಯಕತೆಯೇ ಇಲ್ಲ. ಮಹಾರಾಜನು ಮಾತ್ರ ಸ್ನಾನದಲ್ಲಿ ತೊಡಗಿದ ಅವಳ ಸ್ವರೂಪವನ್ನೇ ನೆನೆಸತೊಡಗಿದ. ವಿವಿಧ ರೀತಿಯಿಂದ ಬಣ್ಣಿಸತೊಡ. ಗಿದ ಇದನ್ನು ಕಂಡು ಕಪಿಂಜಲ ಸಿಟ್ಟಿಗೆದ್ದ. "ಉತ್ತಮ ರತ್ನಗಳು ಚಿನ್ನದೊಡನೆ ಇನ್ನಷ್ಟು ಹೆಚ್ಚಿಗೆ ಸುಂದರವಾಗಿ ಕಾಣುವಂತೆ, ಹುಟ್ಟಾ ಸುಂದರರಾದವರೂ ಕೂಡ ಅಲಂಕಾರಗಳಿಂದ ಮತ್ತಷ್ಟು ಹೆಚ್ಚಿಗೆ ಸುಂದರವಾಗಿ ಕಾಣಿಸುತ್ತಾರೆ" ಎಂದನು.

ಮಹಾರಾಜನಿಗೆ ಈ ಮಾತು ಸರಿಬರಲಿಲ್ಲ. "ಸುಂದರ ಸ್ತ್ರೀಯರು ತಮ್ಮ ವಿಚಿತ್ರ ವೇಷಭೂಷಣಗಳಿಂದ ತಿಳಿಗೇಡಿಗಳ ಮನವನ್ನು ತಮ್ಮೆಡೆಗೆ ಸೆಳೆದುಕೊಳ್ಳುವುದು ವಿಷಾದದ ಸಂಗತಿ.

"ಜಾಣರೂ ಅನುಭವಿಗಳೂ ಆದವರು ಸೌಂದರ್ಯಕ್ಕೆ ಮರು. ಳಾಗುತ್ತಾರೆ. ಸವಿಗಾಗಿ ದ್ರಾಕ್ಷಾರಸಕ್ಕೆ ಸಕ್ಕರೆಯ ಅವಶ್ಯಕತೆ ಇಲ್ಲ. ನಿಸರ್ಗ ಸುಂದರ ವ್ಯಕ್ತಿಗೆ ಅಲಂಕಾರದ ಆವಶ್ಯಕತೆ ಇಲ್ಲ" ಎಂದನು.

ಅರಸನ ಮಾತು ವಿಚಕ್ಷಣೆಗೆ ಯೋಗ್ಯವೆನಿಸಿತು. ಅಲಂಕಾರದ ವಸ್ತುಗಳು ಸ್ವಾಭಾವಿಕ ಸೌಂದರ್ಯವನ್ನು ಕೆಡಿಸುತ್ತವೆಯೆಂದು ಅವಳು ತನ್ನ ಅಭಿಪ್ರಾಯವನ್ನು ವ್ಯಕ್ತಮಾಡಿದಳು.

"ಹೊರಗಿನ ಅಲಂಕಾರಗಳಿಂದ ಲಾಭವೇನೂ ಇಲ್ಲ. ಜನರ ಮನ ಸ್ಸನ್ನು ಸೆಳೆಯುವ ಸುಂದರ ಅಂಗವೆ ಸ್ತ್ರೀಯರ ಅಲಂಕಾರ. ಯೌವನ ಕಾಲವೆಂಬುದು ಪರಮ ಸುಖದಾಯಕವಾದುದು. ಆಗ ತಿಳಿದವರು

ಅಲಂಕಾರದ ಆವಶ್ಯಕತೆ ಇದೆಯೆಂದು ತಿಳಿಯುವುದಿಲ್ಲ. ಯೌವನ ಕಾಲದಲ್ಲಿ ಅಲಂಕಾರ-ಹೀನವಾಗಿದ್ದರೂ ಶರೀರ ಸುಂದರವಾಗಿಯೇ ಇರುತ್ತದೆ" ಎಂದು ಕಪಿಂಜಲನಿಗೆ ಮಹಾರಾಜನು ತಿಳಿಸಿಹೇಳಿದನು.

ಕೊನೆಗೆ ವಿಚಕ್ಷಣೆ "ಕರ್ಪೂರಮಂಜರಿ" ಈಗ ಪ್ರೇಮಪೀಡೆಯಿಂದ ಹೇಗೋ ಅತಿ ಕಷ್ಟದಿಂದ ರಾತ್ರಿಯನ್ನು ಕಳೆಯುತ್ತಿದ್ದಾಳೆ. ಅವಳು ಮಹಾರಾಜನನ್ನು ಪ್ರೀತಿಸುತ್ತಾಳೆ— ಎಂಬ ಸಂಗತಿ ಮಹಾರಾಜನಿಗೆ ಸಂತೋಷವನ್ನು ಕೊಡುತ್ತದೆ. ಬೆಳದಿಂಗಳಿಂದಲೂ ದೂರವಿರಬೇಕೆಂದು ಅವಳ ಚೇಷ್ಟೆ ಭಯವನ್ನುಂಟು ಮಾಡುತ್ತಿದೆ. ಉಳಿದ ಕೆಲಸವೇನೆಂಬುದು ಕಪಿಂಜಲನು ತಿಳಿಸುವನು. ಅದರಂತೆ ಮಹಾರಾಜರು ಮಾಡಬೇಕು" ಎಂದು ಹೇಳಿ ಹೊರಟು ಹೋದಳು.

"ಇಂದು ಜೋಕಾಲಿಯಾಡುವ ಚೌತಿ. ಮಹಾರಾಣಿ ಗೌರಿಪೂಜೆ ಮಾಡಿ ಕರ್ಪೂರಮಂಜರಿಯನ್ನು ಜೋಕಾಲಿಯಲ್ಲಿ ಕುಳ್ಳಿರಿಸಿ ತೂಗುವಳು. ನೀನು ಮರಕತ ಕುಂಜದಲ್ಲಿ ಕುಳಿತು, ಜೋಕಾಲಿಯಾಡುವ ಕರ್ಪೂರಮಂಜರಿಯನ್ನು ನೋಡಬಹುದು; ಈ ಕೆಲಸವೊಂದು ಬಾಕಿ ಉಳಿದಿದೆ" ಎಂದು ಕಪಿಂಜಲ ಹೇಳಿದ.

"ಅತಿ ಜಾಣೆ ಮಹಾರಾಣಿಯನ್ನು ಕೂಡ ಮೋಸಗೊಳಿಸಿದಂತೆ ಆಯಿತು. ಮುದಿ ಬೆಕ್ಕಿಗೆ ಹಾಲಿಂದು ಮಜ್ಜಿಗೆ ಕುಡಿಸಿದಂತಾಯಿತು" ಎಂದು ಅಂದುಕೊಳ್ಳುತ್ತಾ ಇಬ್ಬರೂ ಕದಲಿ ಗೃಹದೊಳಗೆ ಹೋದರು. ಮಹಾರಾಜನು ಎತ್ತರವಾದ ಸ್ಫಟಿಕದ ವೇದಿಕೆಯ ಮೇಲೆ ಕುಳಿತನು.

ಕಪಿಂಜಲನು ಕೈಯೆತ್ತಿ ಕರ್ಪೂರಮಂಜರಿಯನ್ನು ನಿರ್ದೇಶಿಸಿ, "ಹುಣ್ಣಿಮೆಯ ಚಂದ್ರನನ್ನು ನೋಡು" ಎಂದು ಮಹಾರಾಜನಿಗೆ ಅಂದನು.

ಮಹಾರಾಜನು ಜೋಕಾಲಿಯ ಮೇಲೆ ಕುಳಿತ ಕರ್ಪೂರಮಂಜರಿಯನ್ನು ನೋಡಿದನು. ಅವಳ ಸುಂದರ ಮುಖ ನಗರದ ಸಕಲ ಸ್ತ್ರೀಯರ ಮುಖವನ್ನು ತನ್ನ ಸೌಂದರ್ಯದಿಂದ ಮಲಿನಗೊಳಿಸುತ್ತಿತ್ತು. ಮುಖದ ಕಾಂತಿ, ನೋಡುವ ಜನರ ಹೃದಯವನ್ನು ಚೂರು ಚೂರು ಮಾಡುತ್ತಿತ್ತು. ಮೇಲೆ-ಕೆಳಗೆ, ಹತ್ತಿರ-ದೂರಕ್ಕೆ ವೇಗದಿಂದ ಹೋಗುತ್ತಿರುವ ಜೋಕಾಲಿ ಜನರ ಮನವನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತಿತ್ತು. ಹೀಗೆ ಕರ್ಪೂರಮಂಜರಿ ಜೋಕಾಲಿಯಾಡುತ್ತಿದ್ದಾಗ ಮಣಿನೂಪುರಗಳಿಂದ ಝಣ ಝಣವೆಂಬ ಶಬ್ದವಾಗುತ್ತಿತ್ತು. ಟೊಂಕದ ಗೆಜ್ಜೆಗಳಿಂದ ಹಾಗು ಕರಕಂಕಣಗಳಿಂದ ಸುಮಧುರ ಶಬ್ದ ಉತ್ಪನ್ನವಾಗುತ್ತಿತ್ತು. ಆದುದರಿಂದ ಅವಳ ಜೋಕಾಲಿಯ ತೂಗಾಟ ಯಾರ ಮನವನ್ನು ಮೋಹಿಸಲಾರದು ? ಯಾರ ಹೃದಯದಲ್ಲಿ ಈ ಚಿತ್ರ ಚಿತ್ರಿತವಾಗಲಾರದು !

ಕರ್ಪೂರಮಂಜರಿ ಜೋಕಾಲಿಯಿಂದ ಇಳಿದಳು. ಜೋಕಾಲಿ ಖಾಲಿಯಾಯಿತು. ಮಹಾರಾಜನ ಮನವೂ ಇದರಿಂದ ಖಿನ್ನವಾಯಿತು. ಅವಳನ್ನೇ ನೋಡಲು ಹಾತೊರೆಯುತ್ತಿದ್ದ ಮಹಾರಾಜನ ಕಣ್ಣುಗಳು ಖಾಲಿಯಾದವು. ಅವಳನ್ನೇ ನೆನೆಸಿಕೊಂಡು "ಅವಳ ತುಟಿಗಳು ಕೆಂಪಗೆ ಇವೆ, ಶರೀರ ಸುವರ್ಣದಂತೆ, ಕಣ್ಣುಗಳು ಬಿದಿಗೆಯ ಚಂದ್ರನಂತೆ ಉಜ್ವಲವಾಗಿವೆ, ತಲೆಕೂದಲುಗಳು ಕಾಡಿಗೆಯಂತೆ ಕಪ್ಪಾಗಿ ಇವೆ" ಎಂದು ಮೊದಲಾಗಿ ವರ್ಣಿಸತೊಡಗಿದ. ಕರ್ಪೂರಮಂಜರಿ ಒಡನೆಯೇ ಜೋಕಾಲಿಯಿಂದ ಇಳಿದುದರಿಂದ ಕಾಣದಂತಾದಳು. ಇದರಿಂದ ಮಹಾರಾಜನಿಗೆ ಹಿಮವೂ ಕೂಡ ಬಿಸಿಯಾಗಿರುವಂತೆ ಅನಿಸಿತು.

"ಗೆಳೆಯ, ಇದು ಮರಕತ ಕುಂಜ. ಇಲ್ಲಿಯೇ ನೀನು ಕುಳಿತು ಆಕೆಯ ದಾರಿಯನ್ನು ನೋಡುತ್ತಿರು. ನಾನೀಗ ನಿನ್ನ ತಾಪವನ್ನು

ದೂರಮಾಡುವ ವಸ್ತುಗಳನ್ನು ಅಣಿಗೊಳಿಸುವೆನು" ಎಂದು ಹೇಳಿ, ಕಪಿಂಜಲ ಹೊರಟು ಹೋದನು.

ಇತ್ತ ಮಹಾರಾಜ ಕರ್ಪೂರಮಂಜರಿಯನ್ನು ಕಾಣದಿದ್ದುದರಿಂದ ಸಂತಾಪಗೊಂಡಂತೆ, ಅತ್ತ ಕರ್ಪೂರಮಂಜರಿಯೂ ಕೂಡ ತಾಪದಿಂದ ಬಳಲುತ್ತಿದ್ದಳು. ಆಕೆಯ ತಾಪವನ್ನು ದೂರ ಮಾಡಲೆಂದು ವಿಚಕ್ಷಣೆ ಶೈತ್ಯೋಪಚಾರದ ಸಾಮಗ್ರಿಗಳನ್ನು ತೆಗೆದುಕೊಂಡು ಆಕೆಯ ಕಡೆಗೆ ಹೋಗುತ್ತಿದ್ದಳು. ನಡುವೆ ಕಪಿಂಜಲ ಅವಳನ್ನು ಸಂಧಿಸಿದನು. ವಿಚಕ್ಷಣೆ ಕರ್ಪೂರಮಂಜರಿಯ ಅವಸ್ಥೆಯನ್ನು ಕಪಿಂಜಲನಿಗೆ ಹೇಳಿದರೆ, ಕಪಿಂಜಲ ಮಹಾರಾಜನ ಅವಸ್ಥೆಯನ್ನು ವಿಚಕ್ಷಣೆಗೆ ತಿಳಿಸಿದನು. "ನೀನೀಗ ಮಹಾರಾಜನೊಡನೆ ಮರಕತ ಕುಂಜದ ಬಾಗಿಲಿನಲ್ಲಿ ತುಸು ಹೊತ್ತಿನ ವರೆಗೆ ಇರು. ಇಬ್ಬರಿಗೂ ಒಬ್ಬರೊಬ್ಬರ ದರ್ಶನವಾಗುವುದರಿಂದ ಶೈತ್ಯೋಪಚಾರದ ಸಾಮಗ್ರಿಗಳ ಅವಶ್ಯಕತೆಯೇ ಆಗಲಾರದು. ಮಹಾರಾಣಿಯ ಅಪ್ಪಣೆಯಂತೆ ಕರ್ಪೂರಮಂಜರಿ ಬರುವಳು. ಮಹಾರಾಣಿ ಕುರುಬಕ, ತಿಲಕ, ಅಶೋಕ, ಎಂಬ ಮೂರು ಸಣ್ಣ ಸಣ್ಣ ಗಿಡಗಳನ್ನು ನೆಟ್ಟಿರುವಳು. ಕರ್ಪೂರಮಂಜರಿಯೊಡನೆ ವೃಕ್ಷಗಳು ಆಲಿಂಗಿಸಿದರೆ ಕುರುಬಕ ಹೂ ಬಿಡುತ್ತದೆ, ನೋಡಿದ್ದರಿಂದ ತಿಲಕ ಹೂ ಬಿಟ್ಟರೆ, ಕಾಲಿನ ಒದೆತದಿಂದ ಅಶೋಕ ಹೂ ಬಿಡುತ್ತದೆ. ಆದುದರಿಂದ ನೀನೀಗ ವೃಕ್ಷಗಳ ಬಯಕೆಯನ್ನು ಪೂರ್ಣಮಾಡು — ಎಂದು ಹೇಳಿದ್ದಾಳೆ. ಈಗ ಅದನ್ನು ಪೂರ್ಣ ಮಾಡುವಳು" ಎಂದು ವಿಚಕ್ಷಣೆ ಕಪಿಂಜಲನಿಗೆ ತಿಳಿಸಿದಳು.

ಕಪಿಂಜಲನು ಮಹಾರಾಜನನ್ನು ಮರಕತ ಕುಂಜದಿಂದ ತಮಾಲ ವೃಕ್ಷದ ಮರೆಗೆ ಕರೆದುಕೊಂಡು ಬಂದನು. ಕರ್ಪೂರಮಂಜರಿ ತನ್ನನ್ನು

ಚೆನ್ನಾಗಿ ಅಲಂಕರಿಸಿಕೊಂಡು ಬಂದಳು. ಮಹಾರಾಜ ಆಕೆಯನ್ನು ತಮಾಲ ವೃಕ್ಷದ ಮರೆಯಿಂದ ನೋಡತೊಡಗಿದ.

ಕರ್ಪೂರಮಂಜರಿ ಕುರುಬಕ ವೃಕ್ಷದ ಬಳಿಗೆ ಬಂದಳು. ಅದನ್ನು ಗಾಢವಾಗಿ ಆಲಿಂಗಿಸಿಕೊಂಡಳು. ಒಡನೆಯೇ ಅದರಲ್ಲಿ ಸಮೃದ್ಧವಾಗಿ ಹೂಗಳು ಅರಳಿದವು. ಭೃಮರಗಳು ಸುತ್ತಲೂ ಹಾರಾಡಹತ್ತಿದವು. ಬಳಿಕ ತಿಲಕವೃಕ್ಷವನ್ನು ಅಡ್ಡ ದೃಷ್ಟಿಯಿಂದ ನೋಡಿದಳು. ಒಡನೆಯೇ ಆ ಗಿಡದ ತುದಿಯು ಟೊಂಗೆಗಳಲ್ಲಿ ಹೂ ಗೊಂಚಲುಗಳು ತುಂಬಿಕೊಂಡವು. ಒಳಿಕ ಅಶೋಕ ವೃಕ್ಷದ ಒಳಿಗೆ ಬಂದು ಅದನ್ನು ಕಾಲಿನಿಂದ ಒದೆದಳು. ನೂಪುರ ಧ್ವನಿಯಿಂದ ಕೂಡಿದ ಕಾಲಿನ ವಿಲಾಸಪೂರ್ವಕವಾದ ಆಘಾತಕ್ಕೆ, ಅಶೋಕ ವೃಕ್ಷದ ತುದಿಗಳಲ್ಲಿ ಹೂಗೊಂಚಲುಗಳು ಅರಳಿದವು. ಇದರಿಂದ ಆಕಾಶವು ಸುಂದರವಾಗಿ ಕಾಣಿಸಿತು.

ಮಹಾರಾಜನು ಕರ್ಪೂರಮಂಜರಿಯನ್ನು ಮನತಣಿಯುವಂತೆ ನೋಡಿದ. ಅಷ್ಟರಲ್ಲಿ ಸಂಜೆಯಾಯಿತು. ಮಹಾರಾಜನು ಕಪಿಂಜಲನೊಡನೆ ಹೊರಟು ಹೋದನು. ಕರ್ಪೂರಮಂಜರಿ ವಿಚಕ್ಷಣೆಯೊಡನೆ ಸಂಜೆಯಾಯಿತೆಂದು ತೆರಳಿದಳು.

೩

ಮಹಾರಾಜ ಚಂದ್ರಪಾಲನಿಗೆ ಯಾವಾಗಲೂ ಕರ್ಪೂರಮಂಜರಿಯ ಚಿಂತೆಯೇ ಚಿಂತೆ. ಸಂಪಗೆಯ ಮೊಗ್ಗೆಯನ್ನು ದೂರ ಒಗೆಯಿರಿ. ಅರಶಿನದಿಂದ ಉಪಯೋಗವೇನು? ಈಗ ತಾನೆ

ಉದಯಿಸಿದ ಚಂದ್ರನಂತೆ, ಸುಮಧುರವಾದ ಕಾಂತಿಯಿಂದೊಡಗೂಡಿದ ಕರ್ಪೂರಮಂಜರಿಯು ಸೌಂದರ್ಯದ ಸಮ್ಮುಖದಲ್ಲಿ ಉತ್ಕೃಷ್ಟವಾಗಿ ಹೊಳೆಯುತ್ತಿರುವ ಸುವರ್ಣದ ಗಣನೆಯಾದರೂ ಎಲ್ಲಿ? ನವೀನ ಕೇಶರ ಕುಸುಮಗಳಿಂದ ಆಗುವುದೇನು? ಕರ್ಪೂರಮಂಜರಿಯು ಸೌಂದರ್ಯದ ಸರಿಗೆ, ಅರಸನ ಸುವರ್ಣ ಹಾಗು ಕೇಶರ ಪುಷ್ಪ-ಗಳೊಡನೆ ಆಗಲಾರದು. ನೋಡುವವರ ಲಕ್ಷ್ಯವನ್ನು ತನ್ನೆಡೆಗೆ ಸೆಳೆಯುವ ಕರ್ಪೂರಮಂಜರಿಯ ದೃಷ್ಟಿ, ಕಿವಿಗಳ ವರೆಗೆ ದೀರ್ಘವಾಗಿ ಬೆಳೆದು ಮಹಾರಾಜನ ಹೃದಯದೊಳಗೆ ಸೇರಿಕೊಂಡಿತು.

ಕಪಿಂಜಲನಿಗೆ ಮಹಾರಾಜನು ಏನನ್ನೋ ಗುಣುಗುಟ್ಟುತ್ತಿರು-ವಂತೆ ಕಂಡಿತು. "ಸ್ತ್ರೀಜಿತರಾದ ಪುರುಷರಂತೆ ಗುಣುಗುಟ್ಟುವುದೇನು?" ಎಂದು ಪ್ರಶ್ನಿಸಿದನು.

"ಒಂದು ಕನಸನ್ನು ಕಂಡಿದ್ದೇನೆ. ಅದನ್ನು ನೆನಪು ಮಾಡಿ-ಕೊಳ್ಳುತ್ತಿದ್ದೇನೆ. ಕಮಲದಂತೆ ಮುಖವುಳ್ಳ ಕರ್ಪೂರಮಂಜರಿ ನನ್ನ ಹಾಸಿಗೆಯ ಬಳಿಗೆ ಬಂದಳು. ನೀಲವರ್ಣದ ತನ್ನ ಕಣ್ಣುಗಳಿಂದ ನನ್ನನ್ನು ಬಡಿಯಬೇಕೆಂಬ ಬಯಕೆಯಾದುದರಿಂದ, ನನ್ನ ಎರಡು ಭುಜಗಳ ನಡುವೆ ನಿಂತಳು. ಆಗ ನಾನು ಕುತೂಹಲದಿಂದ ಕೂಡಲೇ ವಸ್ತ್ರದ ಸೆರಗಿನಿಂದ ಹಿಡಿದೆನು. ಆದರೆ ಅವಳು ಬಿಡಿಸಿಕೊಂಡು ಓಡಿಹೋದಳು. ಅಷ್ಟರಲ್ಲಿ ನಿದ್ದೆಯೂ ದೂರವಾಯಿತು." ಎಂದು ಕನಸಿನ ವಿಚಾರವನ್ನು ಮಹಾರಾಜನು ತಿಳಿಸಿದನು.

"ನಾನೂ ಒಂದು ಕನಸನ್ನೇ ನೋಡಿರುವೆ"

"ಹೇಳು ನಿನ್ನ ಕನಸು ಎಂತಹದು?"

"ಕನಸಿನಲ್ಲಿ, ಗಂಗಾನದಿಯ ಪ್ರವಾಹದಲ್ಲಿ ಮಲಗಿದಂತೆ ಅನಿಸುತ್ತದೆ. ಶಿವನ ತಲೆಯ ಮೇಲೆ ಕಾಲಿಟ್ಟು ಗಂಗೆಯ ಜಲದಿಂದ

ನ ಮಾಡಿದವನಂತೆ ಆದೆನು. ಬಳಿಕ ಶರತ್ಕಾಲದಲ್ಲಿ ಮಳೆ ಸುರಿಸುವ ಘ ನನ್ನನ್ನು ಯಥೇಚ್ಛವಾಗಿ ಕುಡಿಯಿತು. ಸೂರ್ಯ ಸ್ವಾತೀ ತ್ರವನ್ನು ತಲುಪಿದ ನಂತರ, ಆ ಮಹಾಮೇಘ ತಾಮ್ರಪರ್ಣೀ ಯಿಂದ ಕೂಡಿದ ಸಮುದ್ರದೆಡೆಗೆ ಹೋಯಿತು. ನಾನೂ ಕೂಡ ಘದ ಗರ್ಭದಲ್ಲಿ ಇದ್ದು ಹೋದಂತೆ ಅನಿಸುತ್ತದೆ. ಬಳಿಕ ಅದು ದೊಡ್ಡ ಹನಿಗಳ ಮಳೆಯನ್ನೇ ಸುರಿಸಲು ತೊಡಗಿತು. ಸಮುದ್ರ ಳಗಿರುವ ಮುತ್ತಿನ ಸಿಂಪುಗಳು ತಮ್ಮ ಆವರಣವನ್ನು ಹರಿದು-ಂಡು ಜಲಬಿಂದುಗಳೊಡನೆ ನನ್ನನ್ನು ಕುಡಿದವು. ಮುತ್ತಾಗಿ ಗಳ ಹೊಟ್ಟೆಯೊಳಗೆ ಇದ್ದೆ. ಅರವತ್ತು ನಾಲ್ಕು ಸಿಂಪುಗಳ ಒಳಗೆ, ಬಿಂದುಗಳಂತೆ ಉತ್ಕೃಷ್ಟವಾಗಿ ದುಂಡಗೆ ಆಗಿ, ಹೊಳೆಯುವ ಸಮುತ್ತುಗಳ ರೂಪದಲ್ಲಿ ಮೆಲ್ಲಮೆಲ್ಲನೆ ಪರಿವರ್ತಿತನಾದೆ. ಆ ಪುಗಳ ಗರ್ಭದಲ್ಲಿ ಬಿದ್ದಿದ್ದ ನಾನು, ನನ್ನನ್ನು ಮುತ್ತು ಎಂದು ದುಕೊಳ್ಳತೊಡಗಿದೆ. ಬಳಿಕ ಕೆಲ ಕಾಲದ ನಂತರ ಆ ಸಿಂಪುಗಳನ್ನು ುದ್ರದಿಂದ ಹೊರಗೆ ತೆಗೆದರು, ಸೀಳಿದರು. ನಾನು ಅರವತ್ನಾಲ್ಕು ತ್ತುಗಳ ರೂಪದಲ್ಲಿದ್ದೆ. ಒಬ್ಬ ವ್ಯಾಪಾರಿ ಒಂದು ಲಕ್ಷ ಸುವರ್ಣಕ್ಕೆ ನ್ನು ಖರೀದಿ ಮಾಡಿದನು.

ಮುತ್ತುಗಳಲ್ಲಿ ತೂತು ಮಾಡುವವರನ್ನು ಕರೆಯಿಸಿ ಮುತ್ತು-ಲ್ಲಿ ತೂತು ಕೊರೆಸಿದನು. ಆಗ ನನಗೆ ತುಸು ವೇದನೆಯಾಯಿತು. ಮುತ್ತುಗಳಿಂದ ಒಂದು ಸುಂದರವಾದ ಹಾರವನ್ನು ಮಾಡಿದನು. ರ ಬೆಲೆ ಒಂದು ಕೋಟಿ ಸುವರ್ಣವಿತ್ತು. ಆದನ್ನು ಒಂದು ಕರಡಿಗೆ ಲ್ಲಿಟ್ಟು, ಆ ವ್ಯಾಪಾರಿ ಪಾಂಚಾಲ ದೇಶದ ಕಾನ್ಯಕುಬ್ಜ ನಗರಕ್ಕೆ ಳಿದ. ಅಲ್ಲಿಯ ರಾಜನಾದ ಶ್ರೀ ವಜ್ರಾಯುಧನಿಗೆ ಆ ಹಾರವನ್ನು ಡು ಕೋಟಿ ಸುವರ್ಣಕ್ಕೆ ಮಾರಿದ. ರಾಜನಾದ ವಜ್ರಾಯುಧನು

ಆ ಸರದ ಸೌಂದರ್ಯವನ್ನು ನೋಡಿ ತನ್ನ ರಾಣಿಯ ಕೊರಳಿ ತೊಡಿಸಿದ.

ಒಮ್ಮೆ ಚೆನ್ನಾಗಿ ಬೆಳದಿಂಗಳು ಬಿದ್ದಿತ್ತು. ನಡುರಾತ್ರಿ; ರಾಜ ರಾಣಿಯರು ಗಾಢವಾಗಿ ಆಲಿಂಗಿಸಿಕೊಂಡರು. ಅವರಿಬ್ಬರ ನಡು ನಾನಿದ್ದುದರಿಂದ ನನ್ನ ಮೇಲೆ ಒತ್ತಡ ಬಿದ್ದಿತು. ಆದ್ದರಿಂದ ಒಡ ನಿದ್ದೆ ಎಚ್ಚರವಾಯಿತು." ಎಂದು ಕಪಿಂಜಲ ತನ್ನ ಕನಸಿ ವೃತ್ತಾಂತವನ್ನು ತಿಳಿಸಿ ಹೇಳಿದ.

ಮಹಾರಾಜ ಚಂದ್ರಪಾಲನಿಗೆ ತುಸು ನಗು ಬಂದಿತು. ವಿಚಾರಿಸ ತೊಡಗಿದ. "ನಾನು ಸುಳ್ಳು ಕನಸನ್ನು ನೆನೆಸುತ್ತಾ ಇದ್ದೆ. ನೀನ ನಿನ್ನ ಕನಸಿನ ವೃತ್ತಾಂತವನ್ನು ಹೇಳಿ, ಕನಸನ್ನು ನೆನೆಸುವ ನನ್ನ ಕೆಲಸವನ್ನು ನಿಲ್ಲಿಸಿದೆ." ಎಂದು ಹೇಳಿದ.

ಉನ್ಮತ್ತನಾದ ಅರಸ, ಹಸಿವೆಯಿಂದ ಬಳಲುವ ಬ್ರಾಹ್ಮಣ ಸತ್ಪುರುಷರ ಸಹವಾಸವನ್ನು ಬಯಸುವ ಸ್ತ್ರೀ ಮತ್ತು ವಿಟಿಗಳಾದ ಜನರು ಮನಸ್ಸಿನ ಮಂಡಿಗೆಯಿಂದಲೇ ಪ್ರಸನ್ನರಾಗಿರುತ್ತಾರೆ. ಮಹಾ ರಾಣಿಯೊಡನೆ ಅತ್ಯಧಿಕ ಪ್ರೇಮವಿದ್ದರೂ ಕರ್ಪೂರಮಂಜರಿಯನ್ನು ನೋಡಿದೊಡನೆಯೇ. ಆಕೆಯ ಸಕಲ ಅವಯವಗಳಲ್ಲಿ ಕಣ್ಣನ್ನು ನಡಿಸಿ ಕುಡಿಯುವಂತೆ ಮಹಾರಾಜ ಚಂದ್ರಪಾಲ ಕಾಣುತ್ತಿದ್ದ. ಮಹಾ ರಾಣಿಯ ಗುಣಗಳು ಕರ್ಪೂರಮಂಜರಿಯ ಗುಣಗಳಿಗಿಂತ ಹೀನವಿರ ಬಹುದೋ ಏನೋ!

"ಇದೆಲ್ಲ ಪ್ರೇಮದ ಪ್ರಭಾವ"ವೆಂದ ಚಂದ್ರಪಾಲನ ಮಾತು ಕಪಿಂಜಲನಿಗೆ ಸರಿಬರಲಿಲ್ಲ. ಅವನ ಭಾವವನ್ನು ತಿಳಿದ ಮಹಾರಾಜ ನೆಂದ. "ಯಾವುದೇ ಹೊತ್ತಿನಲ್ಲಿ ಒಬ್ಬರು ಮತ್ತೊಬ್ಬರನ್ನು ಪ್ರೀ ಸಲು ತೊಡಗುತ್ತಾರೆ. ಈ ಪ್ರೇಮಬಂಧನಕ್ಕೆ ಸೌಂದರ್ಯವೇ ಕಾರಣ.

ವಲ್ಲ. ಆದರೂ ಪ್ರೇಮಕ್ಕೆ ಸೌಂದರ್ಯದ ಕಾರಣವನ್ನು ಕೊಡುವುದು ದುಷ್ಟ ಜನರ ಬಾಯಿಯನ್ನು ಮುಚ್ಚಿಸಲಿಕ್ಕೆ. ಸೌಂದರ್ಯದ ಗುಣಗಳ ಉಲ್ಲೇಖವನ್ನು ಮಾಡುವುದು, ಒಬ್ಬರು ಇನ್ನೊಬ್ಬರನ್ನು ಪ್ರೀತಿಸುವುದು ಅಯೋಗ್ಯವೆಂದು ಹೇಳಬಾರದೆಂಬ ಉದ್ದೇಶದಿಂದ. ಸ್ತ್ರೀ-ಪುರುಷರ ಪರಸ್ಪರ ಆಕರ್ಷಣೆಯ ಭಾವವನ್ನೇ ಪ್ರೇಮವೆನ್ನುತ್ತಾರೆ. ಇಂತಹ ಭಾವ ಹುಟ್ಟಿದೊಡನೆ ಪರಸ್ಪರರ ಸಂಶಯ ದಿನಗಳು ದೂರವಾಗುತ್ತವೆ. ಆನಂದ-ಪ್ರವಾಹ ಹರಿಯತೊಡಗುತ್ತದೆ. ಒಬ್ಬರು ಮತ್ತೊಬ್ಬರನ್ನು ಸ್ವಾಭಾವಿಕವಾಗಿ ಕಡೆಗಣ್ಣಿನಿಂದ ನೋಡತೊಡಗುತ್ತಾರೆ. ಅತ್ಯಧಿಕವಾದ ಆನಂದದ ಪ್ರವಾಹ ಹರಿಯತೊಡಗುತ್ತದೆ. ಆ ಹೊತ್ತಿನಲ್ಲಿ ಅವರ ಮನದ ಅಭಿಪ್ರಾಯವೇ ಹರಿದುಬಂದಂತೆ ಕಾಣುತ್ತದೆ. ಪ್ರಿಯ ಜನರ ವಶೀಕರಣಕ್ಕೆ ಕಾರಣವಾದ ವಿಲಾಸದ ಆಡಂಬರವು ಹೃದಯದಲ್ಲಿ ತುಂಬಿಕೊಳ್ಳುತ್ತದೆ. ಅದನ್ನೇ ಜನರು ಪ್ರೇಮವೆನ್ನುತ್ತಾರೆ. ಈ ಪ್ರೇಮದ ಪ್ರಭಾವದಿಂದ ಜನರು ಗುಪ್ತ ಸಂಗತಿಗಳನ್ನು ಕೂಡ ಹೇಳಿಬಿಡುತ್ತಾರೆ. ”

“ ಹೃದಯದ ಪ್ರೇಮ ಆಸಕ್ತಿಯನ್ನು ಹುಟ್ಟಿಸುವುದಾದರೆ ಅಲಂಕಾರಗಳಿಗಾಗಿ ಯಾಕೆ ಪರಿಶ್ರಮಪಡಬೇಕು ? ” ಕಪಿಂಜಲನೆಂದ.

“ ಬಳೆ, ಕಾಲ್ಗೆಜ್ಜೆ ಮೊದಲಾದ ಒಡವೆಗಳಿಂದ ಉಪಯೋಗವೇನೂ ಇಲ್ಲ. ಬಾಹ್ಯಸೌಂದರ್ಯ, ಒನಪು-ಒಯ್ಯಾರಗಳೆಲ್ಲ ವ್ಯರ್ಥ. ಸ್ತ್ರೀಯರು ಆಕರ್ಷಕರಾಗಿ ಕಾಣಲಿಕ್ಕೆ ಕಾರಣ ಬೇರೆಯೇ ಇರುತ್ತದೆ. ಗೀತ, ನೃತ್ಯ, ಮದ್ಯಗಳೆಲ್ಲ ನಿರರ್ಥಕ. ಸುಗಂಧಿತ ಧೂಪಾದಿಗಳಿಂದ ಆಗುವುದೇನು ? ಮನುಷ್ಯನ ಆಸಕ್ತಿಗೆ ಸಮಾನವಾಗಿ ಮಧುರವಾದ ವಸ್ತುವು ಬೇರೊಂದಿಲ್ಲ. ಮಹಾರಾಣಿ ಹಾಗು ಸಾಮಾನ್ಯ ಸ್ತ್ರೀಯರ ಪ್ರೇಮದಲ್ಲಿ ಎಳ್ಳಷ್ಟು ವ್ಯತ್ಯಾಸವಿಲ್ಲ. ಸ್ತ್ರೀಯರು ಪುರುಷರ ಹೃದಯ-

ನನ್ನ ತಮ್ಮ ವಶನಾಗಿಕೊಳ್ಳುತ್ತಾರೆ. ಇದರ ಕಾರಣ ಅನಿವಾ
ಶೀಯವಾಗಿದೆ." ಮಹಾರಾಜನೆಂದನು.

"ಸಾಮಾನ್ಯವಾಗಿ ಮಕ್ಕಳಾಟಿಕೆಯ ಕಾಲದಲ್ಲಿ ಸುಂದರ
ಕಾಣದವನು ಯೌವನ-ಕಾಲದಲ್ಲಿ ಸುಂದರವಾಗಿ ಕಾಣಿಸುತ್ತಾ
ಒಡವೆಗಳಿಂದ ಬರುವ ಸೌಂದರ್ಯ ಅತ್ಯಂತ ಅಲ್ಪವಾದುದು. ವ
ಕತ ಮಣಿಗಳ ಸರ, ಸುವರ್ಣದ ಹಾರಗಳನ್ನೆಲ್ಲ ಒಂದೆಡೆಗೆ ಒಗೆ
ಸ್ತ್ರೀಯರ ಯೌವನವೇ ಹೃದಯವನ್ನು ವಶೀಕರಿಸುತ್ತದೆ. ಯೌವ
ಕಾಲದಲ್ಲಿ ಅವರು ಸೌಂದರ್ಯದಿಂದ ತುಂಬಿತುಳುಕುತ್ತಾರೆ.
ಮೊದಲಾದ ಅವಯವಗಳು ಅತ್ಯಂತ ಆಕರ್ಷಕವಾಗಿ ಕಾಣತೊಡ
ತ್ತವೆ."

ಚಂದ್ರಪಾಲ ಕಪಿಂಜಲರು ಹೀಗೆ ಏನೇನೋ ಹರಟುತ್ತಿದ

ಇತ್ತ ಕರ್ಪೂರಮಂಜರಿಯೂ ಮಹಾರಾಜನನ್ನು ನೋಡಿದ
ನಿಂದ ಪರವಶಳಾಗಿ ವಿರಹವೇದನೆಯನ್ನು ಅನುಭವಿಸತೊಡಗಿ
ಅವಳ ಸಂತಾಪವನ್ನು ದೂರಮಾಡಲೆಂದು, ಗೆಳತಿ ಕುರಂಗಿಕೆ ಶೈತ್ಯೋ
ಪಚಾರವನ್ನು ಮಾಡತೊಡಗಿದಳು. ಆದರೆ ಅವೆಲ್ಲ ಆಕೆಗೆ ಇನ್ನ
ಹೆಚ್ಚಿಗೆ ಸಂತಾಪವನ್ನು ಕೊಡತೊಡಗಿದುವು.

"ಗೆಳತಿ, ನಿನ್ನ ಶೀತೋಪಚಾರದಿಂದ ಸಂತಾಪ ದೂರ
ಆರದು" ಎಂದು ಕರ್ಪೂರಮಂಜರಿ ಅಂದ ಮಾತು ಕಪಿಂಜ
ಕೇಳಿಸಿತು.

"ಗೆಳೆಯ, ಕೇಳಿದೆಯಷ್ಟೆ? ನಿನ್ನ ಕನಸು ನನಸಾಯಿ
ಬಾ, ಹೋಗೋಣ. ಇವಳ ಕಣ್ಣೀರನ್ನು ತಡೆಯೋಣ, ಮನ
ಶಾಂತಗೊಳಿಸೋಣ. ಬಾ, ಈ ಕಿಡಕಿಯಿಂದ ಒಳಗೆ ಹೋಗೋ
ಎಂದು ಮಹಾರಾಜನಿಗೆ ಹೇಳಿದ. ಬಳಿಕ ಇಬ್ಬರೂ ಒಳಗೆ ಹೋ

ಮಹಾರಾಜನನ್ನು ಕಂಡು ಕರ್ಪೂರಮಂಜರಿ ತುಸು ಗಾಬರಿ-
ಡಳು. ಮನದಲ್ಲೇ ಯೋಚಿಸತೊಡಗಿದಳು : "ಆಕಾಶದಿಂದ
ನೇಯ ಚಂದ್ರ ಇಳಿದು ಬಂದನೋ ? ಶಿವನು ಪ್ರಸನ್ನನಾಗಿ
ಥನಿಗೆ ಅವನ ಶರೀರವನ್ನು ತಿರುಗಿ ಕೊಟ್ಟನೋ ? ನನ್ನ ಹೃದಯ-
ಅಪಹರಿಸಿ, ಕಣ್ಣುಗಳನ್ನು ತೃಪ್ತಿಗೊಳಿಸುವ ಯಾವನೋ
ನು ನನ್ನನ್ನು ಪ್ರಸನ್ನಗೊಳಿಸುವನೋ ?"

"ಗೆಳತಿ ಕುರಂಗಿಕೆ, ಏನೋ ಇಂದ್ರಜಾಲವನ್ನು ಕಂಡಂತೆ
ುತ್ತದೆ" ಎಂದು ಗಟ್ಟಿಯಾಗಿ ಅಂದಳು.

ಬಳಿಕ ಕರ್ಪೂರಮಂಜರಿ ಮಹಾರಾಜನನ್ನು ಕಂಡಳು; ಲಜ್ಜಿತ-
ಳು. ಗೆಳತಿಯ ಸೂಚನೆಯಂತೆ ಸ್ವಾಗತಿಸಬೇಕೆಂಬ ಇಚ್ಛೆಯಿಂದ
ುಚ್ಚಿಸಿದಳು. ಆಗ ಚಂದ್ರಪಾಲ ಅವಳ ಕೈಯನ್ನು ಹಿಡಿದ.
ಂದ್ರಾನನೆ, ಸ್ವಾಗತಕ್ಕಾಗಿ ಏಳುವುದು ಬೇಡ. ಈ ದಶೆಯಲ್ಲಿದ್ದ
ನ್ನು ಕಂಡ ನನ್ನ ಕಣ್ಣುಗಳು ಪ್ರಸನ್ನವಾಗಿವೆ. ಹರಿಣಾಕ್ಷಿ, ನಿನ್ನ
ದರ್ಯಕ್ಕೆ ಸರಿಗಟ್ಟುವ ವಸ್ತುವೇ ಇಲ್ಲ." ಎಂದು ಹೇಳಿದನು.

ಗಾಳಿ ಹಾಕುವ ನೆವದಿಂದ ಕಪಿಂಜಲ ದೀಪವನ್ನು ಆರಿಸಿದ.
ಚಂದ್ರಪಾಲ ಕರ್ಪೂರಮಂಜರಿಯನ್ನು ಬಿಟ್ಟು, ಉಳಿದವರೆಲ್ಲ
ದ ಹೊರಟುಹೋದರು.

ಚಂದ್ರಪಾಲ ಕರ್ಪೂರಮಂಜರಿಯ ಕೈಯನ್ನು ಹಿಡಿದು, "ನಾನು
ಕೋಮಲವಾದ ಕೈಯನ್ನು ಹಿಡಿದಿರುವೆ. ನೀನು ಮೆಲ್ಲಮೆಲ್ಲನೆ
ುಲು ಪ್ರಯತ್ನಿಸು." ಎಂದು ಹೇಳಿದನು.

ಚಂದ್ರಪಾಲ ಮಹಾರಾಜನ ಕರಸ್ಪರ್ಶದಿಂದ ಕರ್ಪೂರಮಂಜರಿಗೆ
ೀ ಸುಖವಾದಂತೆ ಅನಿಸಿತು. ಪುಳಕಿತಳಾದಳು.

ಅಷ್ಟರಲ್ಲಿ ಚಂದ್ರೋದಯವಾಯಿತು. ಕುಂಕುಮ-ಚಂದನ-
ಗಳಿಲ್ಲದೆ ಹತ್ತು ದಿಕ್ಕುಗಳನ್ನು ಅಲಂಕರಿಸುವ, ಕಂಕಣ-ಕುಂಡಲಗಳಿ-
ಲ್ಲದೆ ಭೂಮಂಡಲವನ್ನು ಶೃಂಗರಿಸುವ ಹಾಗು ಜನರನ್ನು ಆನಂದ
ಗೊಳಿಸುವಂತಹ ಚಂದ್ರನ ಕಿರಣಗಳು ಗಗನದಲ್ಲಿ ಪಸರಿಸತೊಡಗಿದುವು
ಕ್ರೀಡಾಮಂದಿರಗಳಲ್ಲಿ ಸುಗಂಧಿತ ಧೂಪದ ಬತ್ತಿಗಳು ಉರಿಯತೊಡ-
ಗಿದುವು. ದೀಪಗಳು ಕ್ರೀಡಾಮಂದಿರಗಳನ್ನು ಪ್ರಕಾಶಗೊಳಿಸತೊಡಗಿ-
ದುವು. ಸಕಲ ದಿಕ್ಕುಗಳು ಕರ್ಪೂರದಂತೆ ಚಂದ್ರನ ಕಿರಣಗಳಿಂ
ಉಜ್ವಲವಾದುವು. ಜಗತ್ತಿನ ಸಕಲ ಜನರ ಮನವನ್ನು ಆನಂದಗೊಳಿ
ಸುವ ಚಂದ್ರನ ಸ್ವಚ್ಛವಾದ ಬೆಳದಿಂಗಳು ಎಲ್ಲೆಡೆಯಲ್ಲಿ ಹಬ್ಬಿರುವುದು

ಆಗ ಕುರಂಗಿಕೆ ಕರ್ಪೂರಮಂಜರಿಯ ಬಳಿಗೆ ಬಂದಳು
" ಗೆಳತಿ, ನೀನು ಮಾಡಿದ ಚಂದ್ರನ ವರ್ಣನೆಯನ್ನು ನಾನು ಮಹಾ-
ರಾಜನೆದುರಿಗೆ ಓದುವೆನು " ಎಂದು ಹೇಳಿದಳು. " ಉಜ್ವಲ ಹಾಗ
ಹಸ್ತಿದಂತ ನಿರ್ಮಿತವಾದ ಪಂಜರಕ್ಕಿಂತಲೂ ಸುಂದರವಾದ ಚಂದ್ರ-
ಮಂಡಲದಲ್ಲಿ ಅಡ್ಡಾಡುವ ಈ ಕಲಂಕ ಮೃಗವು ಆಟದ ಕೋಗಿಲೆಯಂ
ಸುಂದರವಾಗಿದೆ " ಎಂದು ಓದಿ ತೋರಿಸಿದಳು.

ಇದನ್ನು ಕೇಳಿ ಮಹಾರಾಜನಿಗೆ ಆಶ್ಚರ್ಯವಾಯಿತು. " ನಿನ್
ಮುಖವನ್ನು ಜನರು ಚಂದ್ರನೆಂದು ತಿಳಿಯಬಾರದೆಂಬ ಉದ್ದೇಶ-
ದಿಂದಲೇ ಚಂದ್ರನು ತನ್ನ ಮೈಮೇಲೆ ಚಿಗರೆಯ ಕಲೆಯನ್ನು ಮಾಡಿ-
ಕೊಂಡಿರುವನು " ಎಂದು ಪ್ರಶಂಸಿದನು.

ಅಷ್ಟರಲ್ಲಿ ಹೊರಗಿನಿಂದ ಏನೋ ಕೋಲಾಹಲ ಕೇಳಬರತೊಡ
ಗಿತು. ಕುರಂಗಿಕೆ ಹೊರಗೆ ಹೋಗಿ ನೋಡಿ ತಿಳಿದುಕೊಂಡು ಬಂದಳು
ಕರ್ಪೂರಮಂಜರಿಯೊಡನೆ " ಗೆಳತಿ, ನೀನು ಮಹಾರಾಜನೊಡ
ಸೇರಿಕೊಂಡ ಸುದ್ದಿ ಮಹಾರಾಣಿಗೆ ಗೊತ್ತಾಗಿದೆ. ಆದುದರಿಂ

ಗಳು ಇಲ್ಲಿಗೆ ಬರುತ್ತಿದ್ದಾಳೆ. ಗೂನುಬೆನ್ನಿನವರು, ಗಿಡ್ಡರು, ಕಂಚುಕಿ-
ಳು ಮೊದಲಾದವರ ಗದ್ದಲವಿದೆಂದು ಹೇಳಿದಳು.''

ಕರ್ಪೂರಮಂಜರಿ ಹೆದರತೊಡಗಿದಳು. ಮಹಾರಾಜರ ಅಪ್ಪಣೆ
ಡೆದು, ಸುರಂಗ ಮಾರ್ಗದಿಂದ ರಕ್ಷಾಗೃಹಕ್ಕೆ ತೆರಳಿದಳು. ಮಹಾ
ಜನೊಡನೆ ತಾನು ಸೇರಿಕೊಂಡ ಸುದ್ದಿ ಮಹಾರಾಣಿಗೆ ಹತ್ತಬಾರ-
ದು ಅವಳು ಬಯಸುತ್ತಿದ್ದಳು.

ಬಿರು ಬೇಸಿಗೆಯ ಸಮಯ. ಉಷ್ಣ ಹವೆ. ಕಾಮಪೀಡಿತ-
ದವರಿಗೆ ಬೇಸಿಗೆಯ ಕಾಲ ಹಾಗು ಪ್ರಿಯ ಜನರ ವಿಯೋಗ, ಇವೆ-
ಡೂ ಕಷ್ಟದಾಯಕ. ಆದುದರಿಂದ ಈ ತಾಪವನ್ನು ಹೇಗೆ ಸಹಿಸಿ-
ಳ್ಳುವುದೆಂದು ಮಹಾರಾಜ ಚಂದ್ರಪಾಲ ಆಲೋಚಿಸುತ್ತಿದ್ದನು.

ಕೆಲ ಜನರು ಕಾಮಪೀಡಿತರಾದರೆ ಮತ್ತೆ ಕೆಲವರು ಬೇಸಗೆಯ
ಗೆಯಿಂದ ಬಳಲುತ್ತಾರೆ. ಕಪಿಂಜಲನಂಥವರಿಗೆ ಕಾಮಪೀಡೆಯೂ
ಲ್ಲ. ಬೇಸಗೆಯ ತಾಪವೂ ಇಲ್ಲ.

ಬೇಸಗೆಯ ಕಾಲದಲ್ಲಿ ಇರುಳು ಚಿಕ್ಕದಾದರೆ, ಹಗಲು ದೊಡ್ಡ-
ಗುತ್ತದೆ. ಸೂರ್ಯ ಅತ್ಯಂತ ಪ್ರಖರನಾಗುತ್ತಾನೆ. ಚಂದ್ರಪಾಲನಿಗೆ
ತಹ ನಿಯಮವನ್ನು ಮಾಡಿದ ವಿಧಿಯನ್ನು ಕತ್ತರಿಸಿ ಹಾಕಬೇಕೆಂಬ
ನವಾಯಿತು. ಪ್ರೇಯಸಿ ಬಳಿಯಲ್ಲಿದ್ದರೆ ಇಂತಹ ಬೇಸಗೆಯ
ಲದ ಸದುಪಯೋಗವನ್ನು ಮಾಡಬೇಕೆಂಬ ವಿಚಾರವೂ ಬಂದಿತು.
ಧ್ಯಾಹ್ನದ ಹೊತ್ತಿಗೆ ದೇಹಕ್ಕೆ ಗಂಧವನ್ನು ಲೇಪಿಸಿಕೊಳ್ಳಬೇಕು.
ಜೆಯ ವರೆಗೆ ಒದ್ದೆಯಾದ ಅರಿವೆಯನ್ನು ಉಡಬೇಕು. ಪ್ರದೋಷ
ಲ ಬಂದೊಡನೆ ಜಲಕ್ರೀಡೆಯಾಡಬೇಕು. ಬಳಿಕ ಶೀತಲ ಮದ್ಯವನ್ನು
ವಿಸಿ, ಅಪರ ರಾತ್ರಿಯಲ್ಲಿ ಸುರತ ಕ್ರೀಡೆಯ ಸವಿಯನ್ನು ಪಡೆಯ-
ಕೆಂಬುದು ಮಹಾರಾಜನ ಯೋಚನೆ.

“ ಗೆಳೆಯ, ಈ ಬೇಸಗೆಯ ಕಾಲದಲ್ಲಿ ನಾಗವಲ್ಲಿಯ ದಳಗಳ
ಶೀತಕಾಂತಿಯಿಂದ ಕೂಡಿರುತ್ತವೆ. ಹೂವು, ತೈಲ, ಮೃದುವಾ
ಅಡಿಕೆಗಳು ಮತ್ತು ಕರ್ಪೂರದ ಸುವಾಸನೆಯಿಂದ ಕೂಡಿದ ಗಂಧಾದಿ
ಗಳು ಈ ಕಾಲದಲ್ಲಿ ಬೇಕಾದಷ್ಟು ಸಿಗುತ್ತವೆ. ಆದುದರಿಂದ ಇಂತಹ
ಬೇಸಗೆಯ ಕಾಲ ಶಾಶ್ವತವಾಗಿ ಉಳಿಯಲೆಂದು ನನ್ನ ಹಾರೈಕೆ
ಕಪಿಂಜಲನು ಮಹಾರಾಜನಿಗೆ ಹೇಳಿದನು.

“ ರಾಗಪೂರ್ಣವಾಗಿ ಕಿವಿಗೆ ಸುಮಧುರವಾಗಿ ಕೇಳಿಸು
ಮುರಲೀ ವಾದ್ಯ, ಶೀತಜಲದೊಡನೆ ಮುಖವನ್ನು ಶೀತಲಗೊಳಿಸು
ಮದ್ಯ ಮತ್ತು ಮೈಗೆ ಗಂಧವನ್ನು ಲೇಪಿಸಿಕೊಂಡ ಸ್ತ್ರೀ, ಈ ಮೂ
ಸ್ವಾಭಾವಿಕವಾಗಿ ಸುಖವನ್ನು ಕೊಡುವವು. ಪೂರ್ವದಲ್ಲಿ ಪು
ಮಾಡಿದವನಿಗೆ ಮಾತ್ರ ಈ ಮೂರೂ ಲಭಿಸುವವು. ವಸಂತಕಾ
ಮುಗಿದು ಬೇಸಗೆಯ ಕಾಲ ಬಂದೊಡನೆ, ಕಿವಿಗಳಿಗೆ ಶಿರೀಷ ಪುಷ್ಪ
ವನ್ನು ಸಿಕ್ಕಿಸಿಕೊಳ್ಳುವುದು, ಎದೆಯ ಮೇಲೆ ಸುಂದರವಾದ ಹೂಗ
ಮಾಲೆಯನ್ನು ಧರಿಸುವುದು, ಒದ್ದೆಯಾದ ವಸ್ತ್ರವನ್ನು ಧರಿಸುವುದ
ರತ್ನಖಚಿತವಾದ ಮೇಖಲೆಯನ್ನು ಧರಿಸುವುದು ಮತ್ತು ಎರಡು
ಭುಜಗಳಲ್ಲಿ ಕಮಲದ ದೇಟಿನ ಬಳೆಗಳನ್ನು ತೊಡುವುದು—ಇ
ಸ್ತ್ರೀಯರ ಸುಂದರವೇಷಭೂಷಣೆಯಾಗಿರುತ್ತವೆ. ಇದರಿಂದ ಅವರಿ
ತನು ತಾಪಶಾಂತಿಯಾಗುತ್ತದೆ. ” ಎಂದನು ಚಂದ್ರಪಾಲ.

ಬೇಸಗೆಯ ದಿನಗಳಲ್ಲಿ ಮಧ್ಯಾಹ್ನಕ್ಕೆ ಸ್ತ್ರೀಯರು ತೆಳ್ಳನೆ
ಅರಿವೆಯನ್ನು ತೊಡುತ್ತಿದ್ದರು. ದೇಹಕ್ಕೆ ಗಂಧವನ್ನು ದಪ್ಪವಾ
ಲೇಪಿಸಿಕೊಳ್ಳುತ್ತಿದ್ದರು. ಸಂಜೆಯಾದೊಡನೆ ದಿನವೂ ಸ್ನಾ
ಮಾಡುತ್ತಿದ್ದರು. ಮಲಗಿದಾಗಲೂ ಬೇಸಗೆಯಿಂದ ಬಿದ್ದ ಜಲ
ಕಣಗಳಿಂದ ಅವರ ಶರೀರ ಒದ್ದೆಯಾಗಿಯೇ ಇರುತ್ತಿತ್ತು. ತ

ಯು ಜನರೊಡನೆ ಕೂಡಿಕೊಂಡು ಇರುವವರಿಗೆ ಈ ದಿನಗಳು ಬೇಗನೆ
ರುಳಿ ಹೋದಂತೆ ಕಾಣುತ್ತಿದ್ದವು. ಮನವನ್ನು ಆನಂದಗೊಳಿಸುವ
ಯು ಜನರಿಲ್ಲದವರಿಗೆ ಈ ಬೇಸಗೆಯ ದಿನಗಳು ದುಃಖದಾಯಕ-
ದುವು ಮತ್ತು ಅತಿ ದೀರ್ಘವಾದಂತೆ ಅನಿಸಿದುವು.

ಇಂತಹ ಹೊತ್ತಿನಲ್ಲಿ ಮಹಾರಾಜನಿಗೆ ಒಮ್ಮೆಲೇ ಕರ್ಪೂರ-
ಂಜರಿಯ ಪರಿಸ್ಥಿತಿಯನ್ನು ತಿಳಿಯಬೇಕೆಂಬ ಮನವಾಯಿತು.
ಅವಳ ಸುದ್ದಿ ನಿನಗೇನಾದರೂ ತಿಳಿದಿದೆಯೋ?" ಎಂದು ಕಪಿಂಜಲ
ನ್ನು ಕೇಳಿದನು.

"ಹೌದು ಗೊತ್ತಿದೆ. ನಿನಗೆ ಶುಭ ಸಮಾಚಾರವನ್ನು ಹೇಳು
ನು" ಎಂದು ಆತ ಹೇಳತೊಡಗಿದನು.

"ಮಹಾರಾಣಿಯು ಒಮ್ಮೆ ಕರ್ಪೂರಮಂಜರಿ ಸುರಂಗ ದ್ವಾರದಲ್ಲಿ
ಹೋಗುತ್ತಿದ್ದುದನ್ನು ನೋಡಿದಳು. ಅಂದಿನಿಂದ ಆ ಸುರಂಗ ಮಾರ್ಗ-
ನ್ನು ಕಲ್ಲುಗಳಿಂದ ಮುಚ್ಚಿದಳು. ಅನಂಗಸೇನೆ, ಕಲಿಂಗಸೇನೆ,
ಾಮಸೇನೆ, ವಸಂತಸೇನೆ ಮತ್ತು ವಿಭ್ರಮಸೇನೆಯೆಂಬ ಹೆಸರಿನ
ದು ಮಂದಿ ಚಾಮರ-ಧಾರಿಣಿಯರನ್ನು ಕಾರಾಗೃಹದ ಪೂರ್ವ
ಕ್ಕಿನಲ್ಲಿ ರಕ್ಷಣೆಗಾಗಿ ನಿಯಮಿಸಿದ್ದಾಳೆ. ಅವರ ಕೈಕೆಳಗೆ ಹೊಳೆಯು
ರುವ ಖಡ್ಗವನ್ನು ಹಿಡಿದ ಸಾವಿರಾರು ಜನ ಕಾಲಾಳುಗಳು ಇದ್ದಾರೆ."

"ಅನಂಗಲೇಖೆ, ಚಿತ್ರಲೇಖೆ, ಚಂದ್ರಲೇಖೆ, ಮೃಗಾಂಕಲೇಖೆ
ಮತ್ತು ವಿಭ್ರಮಲೇಖೆಯೆಂಬ ಹೆಸರಿನ ಐದುಮಂದಿ ಸೈರಂಧ್ರಿಯರನ್ನು
ದಕ್ಷಿಣ ದಿಕ್ಕಿನಲ್ಲಿ ನಿಲ್ಲಿಸಿದ್ದಾಳೆ. ಹೆದೆಗೇರಿಸಿದ ಬಾಣವಿರುವ ಧನುಸ್ಸನ್ನು
ಂಡಿದು, ಬತ್ತಳಿಕೆಯನ್ನು ಸರಿಯಾಗಿ ಕಟ್ಟಿಕೊಂಡು ಸಿದ್ಧರಾದ
ಸಾವಿರ ಧನುರ್ಧಾರಿಗಳು ಅವರೊಡನೆ ಇದ್ದಾರೆ."

"ಕುಂದಮಾಲೆ, ಚಂದನಮಾಲೆ, ಕುವಲಯ ಮಾಲೆ, ಕಾಂಚನ ಮಾಲೆ, ಬಕುಲಮಾಲೆ, ಮಂಗಲಮಾಲೆ ಮತ್ತು ಮಾಣಿಕ್ಯಮಾಲೆಯೆಂಬ ಏಳು ಜನ ತಾಂಬೂಲದ ಡಬ್ಬಿಯನ್ನು ಹಿಡಿಯುವವರನ್ನು ಪಶ್ಚಿಮ ದಿಕ್ಕಿನಲ್ಲಿ ನಿಯೋಜಿಸಿದ್ದಾಳೆ. ಇವರೊಡನೆಯೂ ಸಾವಿರ ಸೈನಿಕರಿದ್ದಾರೆ. ಅವರೆಲ್ಲ ಹರಿತವಾದ ಭಲ್ಲೆಗಳನ್ನು ಹಿಡಿದಿದ್ದಾರೆ."

"ಅದರಂತೆ ಉತ್ತರ ದಿಕ್ಕಿನಲ್ಲಿಯೂ ಕೂಡ ಅನಂಗಕೇಲಿ, ಪುಷ್ಪಕೇಲಿ, ಕಂದರ್ಪಕೇಲಿ, ಸುಂದರಕೇಲಿ ಮತ್ತು ಉತ್ಪಲಕೇಲಿ ಎಂಬ ಐದು ಜನ ಸ್ನಾನದ ಪರಿಚಾರಿಕೆಯರನ್ನು ಕತ್ತಿ-ಗುರಾಣಿ-(ಢಾಲು)ಗಳನ್ನು ಧರಿಸಿದ ಸಹಸ್ರ ಸೈನಿಕರೊಡನೆ ನಿಲ್ಲಿಸಿದ್ದಾಳೆ. ಇವರೆಲ್ಲರ ಮೇಲೆ ಮದಿರಾವತಿ, ಕೇಲೀವತಿ, ಕಲ್ಲೋಲವತಿ, ತರಂಗವತಿ ಮತ್ತು ಅನಂಗವತಿಯೆಂಬ ಐದು ಜನ ಕುಮಾರಿಯರಾದ ಪರಿಚಾರಿಕೆಯರು ಕೈಯಲ್ಲಿ ಸುವರ್ಣ ದಂಡವನ್ನು ಹಿಡಿದು ಇದ್ದಾರೆ. ಇವರೆಲ್ಲರೂ ಈ ಸೇನೆಯ ಅಧ್ಯಕ್ಷರಾಗಿದ್ದಾರೆ" ಕಪಿಂಜಲ ಹೀಗೆ ಕರ್ಪೂರಮಂಜರಿಯ ವಿಷಯವಾಗಿ ವಿಶದವಾಗಿ ಹೇಳಿದನು.

ಅಷ್ಟರಲ್ಲಿ ಸಾರಂಗಿಕೆ ಮಹಾರಾಜನಿದ್ದಲ್ಲಿಗೆ ಬಂದು, "ಮಹಾರಾಜನಿಗೆ ಜಯವಾಗಲಿ, ಇಂದು ನಾಲ್ಕನೆಯ ದಿನ ಆಗುವ ವಟ ಸಾವಿತ್ರಿಯ ಮಹೋತ್ಸವದ ಶೋಭೆಯನ್ನು ಮಹಾರಾಜರು ಕೇಲೀ ವಿಮಾನ ಪ್ರಾಸಾದವನ್ನು ಏರಿ ನೋಡಬೇಕೆಂದು ಮಹಾರಾಣಿಯವರ ವಿಜ್ಞಾಪನೆ" ಎಂದು ನಿವೇದಿಸಿದಳು.

ಮಹಾರಾಜ ಚಂದ್ರಪಾಲ ಮತ್ತು ಕಪಿಂಜಲರು ಕೇಲೀ ವಿಮಾನವೆಂಬ ಉಪ್ಪರಿಗೆ ಮನೆಯನ್ನೇರಿದರು. ಅನೇಕ ನರ್ತಕಿಯರು ಅವರ ಕಣ್ಣಿಗೆ ಬಿದ್ದರು. ಅವರಲ್ಲಿ ಕೆಲವರು ಮುತ್ತಿನ ಒಡವೆಗಳನ್ನು ಧರಿಸಿದ್ದರು. ಧರಿಸಿದ ವಸ್ತ್ರವು ಗಾಳಿಗೆ ಹಾರಾಡುತ್ತಿತ್ತು. ನೃತ್ಯ ಮುಗಿ-

ದೊಡನೆ ಒಬ್ಬರು ಮತ್ತೊಬ್ಬರನ್ನು ರತ್ನಪಾತ್ರೆಯ ನೀರಿನಿಂದ ಸಿಂಪಡಿ-ಸುತ್ತಿದ್ದರು. ಇತ್ತ ಒಂದೆಡೆಯಲ್ಲಿ ಮೂವತ್ತೆರಡು ಜನ ನರ್ತಕಿಯರು ಒಂದು ತರದ ವಿಚಿತ್ರವಾದ ಬಂಧನದಿಂದ ಆಡ್ತಾಡುತ್ತಿದ್ದರು. ತಾಳಕ್ಕನುಸರವಾಗಿ ಹೆಜ್ಜೆ ಹಾಕುತ್ತಿದ್ದರು. ಮತ್ತೆ ಕೆಲ ನರ್ತಕಿ-ಯರು ಹೆಗಲು-ತಲೆಗಳನ್ನು ಸಮಾನ ಮಾಡಿಕೊಂಡು, ತೋಳು-ಕೈಗಳನ್ನು ಒಂದೇ ಸ್ಥಿತಿಯಲ್ಲಿಟ್ಟು, ತಪ್ಪು ಮಾಡದೆ ಎರಡು ಸಾಲು-ಗಳಲ್ಲಿ ತಾಳಕ್ಕನುಸಾರವಾಗಿ ನಡೆಯುತ್ತಿದ್ದರು. ಇನ್ನು ಕೆಲವು ನರ್ತಕಿಯರು ರತ್ನಜಟಿತವಾದ ಕವಚಗಳನ್ನು ತೆಗೆದಿಟ್ಟು, ಯಂತ್ರದಿಂದ ನೀರನ್ನು ಹಾರಿಸುತ್ತಿದ್ದರು. ಕರೀ ಮೈಬಣ್ಣವಿರುವ ಕೆಲವು ವಿಲಾಸಿ-ನಿಯರು ತಮ್ಮ ಅಡ್ಡನೋಟದಿಂದ ಜನರನ್ನು ನಗಿಸುತ್ತಿದ್ದರು. ಕೆಲವು ಸ್ತ್ರೀಯರು ಗೆಜ್ಜೆಗಳಿಂದ ಝಣ ಝಣ ಶಬ್ದಮಾಡುತ್ತಾ ಇದ್ದರೆ, ಮತ್ತೆ ಕೆಲವರು ಕುತೂಹಲದಿಂದ ಚಪಲವೇಷವನ್ನು ಧರಿಸಿ, ವೀಣೆ-ಯನ್ನು ಬಾರಿಸುತ್ತ ಮಲಿನ ವೇಷದಿಂದ ಜನರನ್ನು ನಗಿಸುತ್ತಿದ್ದರು; ನಮಸ್ಕರಿಸುತ್ತಿದ್ದರು ಮತ್ತು ತಾವೂ ನಗುತ್ತಿದ್ದರು. ಚಂದ್ರಪಾಲ, ಕಪಿಂಜಲರು ವಿವಿಧ ವಿನೋದಗಳನ್ನು ನೋಡುತ್ತಿದ್ದಾಗ, ಸಾರಂಗಿಕೆ ಮತ್ತೊಮ್ಮೆ ಮಹಾರಾಜನ ಬಳಿಗೆ ಬಂದು, "ಮಹಾರಾಜನಿಗೆ ಜಯವಾಗಲಿ, ಮಹಾರಾಣಿ ಇಂದು ಸಂಜೆ ತಮಗೆ ವಿವಾಹ ಮಾಡಿಸು-ವೆನೆಂದು ಹೇಳಿದ್ದಾಳೆ" ಎಂದು ಮಹಾರಾಣಿಯ ಸಂದೇಶವನ್ನು ತಿಳಿಸಿದಳು.

ಮಹಾರಾಜನಿಗೆ ಸಾರಂಗಿಕೆಯ ಮಾತಿನ ಪೂರ್ಣ ಮರ್ಮ ತಿಳಿಯಲಿಲ್ಲ. ಆದುದರಿಂದ ಸವಿಸ್ತಾರವಾಗಿ ತಿಳಿಸೆಂದು ಹೇಳಿದನು.

"ನಿನ್ನೆ ಚತುರ್ದಶೀ ದಿವಸ ಪದ್ಮರಾಗ ಮಣಿಯಿಂದ ಗೌರಿಯ ಪ್ರತಿಮೆಯನ್ನು ಮಾಡಿಸಿ, ಭೈರವಾನಂದನಿಂದ ಅದರ ಪ್ರಾಣ ಪ್ರತಿಷ್ಠೆ-

ಯನ್ನು ಮಾಡಿಸಿದಳು. ಬಳಿಕ ಅವನನ್ನು ಗುರುವನ್ನಾಗಿ ಮಾಡಿಕೊಂಡು, ಅವನಿಂದ ದೀಕ್ಷೆಯನ್ನು ಕೈಕೊಂಡಳು. ಆಮೇಲೆ ಗುರುದಕ್ಷಿಣೆಯನ್ನು ತೆಗೆದುಕೊಳ್ಳಬೇಕೆಂದು ಮಹಾರಾಣಿ ಹೇಳಿದಳು. 'ಗುರುದಕ್ಷಿಣೆಯನ್ನು ಕೊಡುವುದಾದರೆ ಅದನ್ನು ಮಹಾರಾಜನಿಗೆ ಕೊಡು.'—ಎಂದು ಭೈರವಾನಂದನು ಹೇಳಿದುದನ್ನು ಮಹಾರಾಣಿ ಮನ್ನಿಸಿದಳು. 'ಲಾಟ ದೇಶದಲ್ಲಿ ಚಂದ್ರಸೇನನೆಂಬ ರಾಜನಿದ್ದಾನೆ. ಅವನಿಗೆ ಘನಸಾರಮಂಜರಿಯೆಂಬ ಪುತ್ರಿಯೊಬ್ಬಳಿದ್ದಾಳೆ. ಅವಳು ಚಕ್ರವರ್ತಿ ಅರಸನ ರಾಣಿಯಾಗುವಳೆಂದು ಜ್ಯೋತಿಷಿಗಳು ಹೇಳಿದ್ದಾರೆ. ಆದುದರಿಂದ ಮಹಾರಾಜನೊಡನೆ ಘನಸಾರಮಂಜರಿಯ ವಿವಾಹವಾಗಬೇಕು. ಆಗ ನನಗೆ ಗುರುದಕ್ಷಿಣೆಯನ್ನು ಕೊಟ್ಟಂತೆ ಆಗುವುದಲ್ಲದೆ, ನಿನ್ನ ಮೂಲಕ ನಿನ್ನ ಪತಿಯೂ ಚಕ್ರವರ್ತಿಯಾಗುವನು.'' ಎಂದು ಭೈರವಾನಂದ ಹೇಳಿದನು. ಬಳಿಕ ಮಹಾರಾಣಿ ನಕ್ಕು, 'ನಿಮ್ಮ ಆದೇಶವನ್ನು ಪಾಲಿಸುವೆ'ನೆಂದು ಹೇಳಿದಳು. "ಈ ಗುರುದಕ್ಷಿಣೆಯ ಸಂಗತಿಯನ್ನು ತಿಳಿಸಲು ನನ್ನನ್ನು ಕಳಿಸಲಾಗಿದೆ" ಎಂದು ಸಾರಂಗಿಕೆ ನಡೆದ ಸಂಗತಿಯನ್ನು ವಿವರಿಸಿ ತಿಳಿಸಿದಳು.

ಲಾಟ ದೇಶದಲ್ಲಿದ್ದ ಘನಸಾರಮಂಜರಿಯೊಡನೆ ವಿವಾಹವಿಂದು ಇಲ್ಲಿ ಹೇಗೆ ಆಗುವುದೆಂದು ಕಪಿಂಜಲನಿಗೆ ನಗು ಬಂದಿತು.

"ಭೈರವಾನಂದನ ಪ್ರಭಾವ ಹೇಗಿದೆ ಎಂಬುದು ಗೊತ್ತಿಲ್ಲವೇ?" ಎಂದು ಕಪಿಂಜಲನಿಗೆ ಹೇಳಿ, ಸಾರಂಗಿಕೆಯೊಡನೆ "ಭೈರವಾನಂದನೆಲ್ಲಿರುವನು?" ಎಂದು ಮಹಾರಾಜನು ಕೇಳಿದನು.

"ಮಹಾರಾಣಿ ಮಾಡಿಸಿದ ಪ್ರಮದೋದ್ಯಾನದ ಮಧ್ಯದಲ್ಲಿದ್ದ ಆಲದಗಿಡದ ಕೆಳಗೆ ಇರುವ ಚಾಮುಂಡೀ ಮಂದಿರಕ್ಕೆ ಭೈರವಾನಂದರು ಮತ್ತು ಮಹಾರಾಣಿಯವರು ಬರುವರು. ಇಂದು ಗುರುದಕ್ಷಿಣೆಯ

ೂಪದಿಂದ ವಿವಾಹವಾಗುವುದು; ಆದುದರಿಂದ ಮಹಾರಾಜರು ಲ್ಲಿಯೇ ಇರಬೇಕು" ಎಂದು ಹೇಳಿ ಸಾರಂಗಿಕೆ ಹೊರಟಳು.

ತುಸು ಸಮಯ ಕಳೆಯಿತು. ಭೈರವಾನಂದನು ವಟವೃಕ್ಷದ ಳಗೆ ಇರುವ ಸುರಂಗ ದ್ವಾರದಲ್ಲಿದ್ದ ಚಾಮುಂಡೀ ದೇವಿಯ ಬಳಿಗೆ ಂದು ಕೈಜೋಡಿಸಿ ನಮಸ್ಕರಿಸಿದನು. ಅಲ್ಲಿಯೇ ಕುಳಿತು ಕರ್ಪೂರ-ಂಜರಿ ಇನ್ನೂ ಯಾಕೆ ಬರಲಿಲ್ಲವೆಂದು ಯೋಚಿಸುತ್ತಿರುವಷ್ಟ-ಲ್ಲಿಯೇ, ಕರ್ಪೂರಮಂಜರಿ ಬಂದು ಭೈರವಾನಂದನಿಗೆ ನಮಸ್ಕರಿ-ದಳು. ಆಗ ಇನ್ನೂ ಮಹಾರಾಣಿ ಬಂದಿದ್ದಿಲ್ಲ.

ತುಸು ಹೊತ್ತಿನ ನಂತರ ಮಹಾರಾಣಿ ಬಂದಳು. ಚಾಮುಂಡೀ ೀವಿಗೆ ನಮಸ್ಕರಿಸಿ ಕರ್ಪೂರಮಂಜರಿಯನ್ನು ಕಂಡು ಚಕಿತಳಾಗಿ, ಇದೇನು ಸಂಗತಿ ನನ್ನ ಮನೆಯಲ್ಲಿ ವಿವಾಹದ ಸಾಮಗ್ರಿಗಳನ್ನು ಣಿಗೊಳಿಸಿ ಬಂದಿರುವೆ. ಈಗ ಅವನ್ನು ತರುವೆ"ನೆಂದು ಹೋದಳು.

ಮಹಾರಾಣಿಗೆ ಕರ್ಪೂರಮಂಜರಿಯೇ ಘನಸಾರಮಂಜರಿ-ಂಬುದು ತಿಳಿದಿಲ್ಲ. ಕರ್ಪೂರಮಂಜರಿ ಭೈರವಾನಂದನ ಸೂಚನೆ-ಂತೆ ಸುರಂಗದ್ವಾರದ ಮೂಲಕ ತನ್ನ ಸ್ಥಾನಕ್ಕೆ ತೆರಳಿದಳು. ಅಲ್ಲಿ ರ್ಪೂರಮಂಜರಿಯನ್ನು ಕಂಡು ಚಕಿತಳಾದಳು. ಭೈರವಾನಂದನ ಳಿಗೆ ಬಂದರೆ, ಕರ್ಪೂರಮಂಜರಿ ಭೈರವಾನಂದನ ಶಕ್ತಿಯ ಬಲದಿಂದ ಲ್ಲಿಯೇ ಬಂದಿದ್ದಳು. ಹೀಗೆ ರಾಣಿಯ ಮನಸ್ಸು ತಳಮಳಕ್ಕೀಡಾ-ತು. ಪುನಃ ಆಭರಣಗಳನ್ನು ತರುವ ನೆವದಿಂದ ಮಹಾರಾಣಿ ರ್ಪೂರಮಂಜರಿ ಇರುವ ರಕ್ಷಾಗೃಹದ ಕಡೆಗೆ ಬಂದಳು. ಅಲ್ಲಿ ಹಾರಾಣಿ ಬರುವುದಕ್ಕಿಂತ ಮೊದಲೇ ಬಂದಿದ್ದ ಕರ್ಪೂರಮಂಜರಿ-ನ್ನು ಇನ್ನೊಮ್ಮೆ ನೋಡಿ, ರೂಪಸಾದೃಶ್ಯದ ಭಾವನೆಯಿಂದ ಗಾದಳು.

ಇಷ್ಟಾದರೂ ಕರ್ಪೂರಮಂಜರಿಯೇ ಘನಸಾರಮಂಜರಿ-ಯೆಂಬುದು ಮಹಾರಾಣಿಗೆ ಗೊತ್ತಾಗಲಿಲ್ಲ. ಬಳಿಕ ಚಾಮುಂಡೀ ದೇವಿಯ ಗುಡಿಗೆ ಬಂದಳು. ಕರ್ಪೂರಮಂಜರಿಯನ್ನು ಅಲ್ಲಿ ಕಂಡು ಬೆರಗಾದಳು. ಬಳಿಕ ಮಹಾರಾಜ, ಕಪಿಂಜಲ ಮತ್ತು ಸಾರಂಗಿಕೆಯರೂ ಬಂದರು. ಎಲ್ಲರೂ ತಮಗೆ ಯೋಗ್ಯವಾದ ಸ್ಥಾನದಲ್ಲಿ ಕುಳಿತರು.

ಮಹಾರಾಜ ಚಂದ್ರಪಾಲನು ಕರ್ಪೂರಮಂಜರಿಯನ್ನು ಮನ-ದಣಿಯೇ ನೋಡಿ ಬಣ್ಣಿಸತೊಡಗಿದನು. ಮಹಾರಾಣಿಯ ಆದೇಶ-ದಂತೆ ಕುರಂಗಿಕೆ ಮಹಾರಾಜನಿಗೆ ವಸ್ತ್ರಗಳನ್ನು ಅಣಿಗೊಳಿಸಿದರೆ, ಸಾರಂಗಿಕೆ ಘನಸಾರಮಂಜರಿಯ ವಸ್ತ್ರಗಳನ್ನು ಅಣಿಗೊಳಿಸಿದಳು. ಕಪಿಂಜಲನಿಗೆ ಪೌರೋಹಿತ್ಯದ ಕಾರ್ಯವನ್ನು ಒಪ್ಪಿಸಲಾಯಿತು.

ಇದುವರೆಗೂ ಮಹಾರಾಣಿ ಘನಸಾರಮಂಜರಿಯನ್ನು ಬೇರೊ-ಬ್ಬಳು ಕನ್ನೆಯೆಂದೇ ತಿಳಿದಿದ್ದಳು. ಆದುದರಿಂದ "ಕರ್ಪೂರಮಂಜರಿ ಎಲ್ಲಿದ್ದಾಳೆ?" ಎಂದು ಚಕಿತಳಾಗಿ ಕೇಳಿದಳು.

ಮಹಾರಾಣಿಯ ಭಾವವನ್ನು ತಿಳಿದು ಭೈರವಾನಂದ ವಿದೂಷಕ-ನೊಡನೆ, "ನೀನೇನೋ ಭ್ರಮೆಯಲ್ಲಿರುವಿ. ಯಾಕೆಂದರೆ, ಕರ್ಪೂರ-ಮಂಜರಿಯೆಂಬುದು ಘನಸಾರಮಂಜರಿಯ ಬೇರೊಂದು ಹೆಸರೆಂದು ತಿಳಿದುಕೊಂಡಿರುವಿ" ಎಂದು ಹೇಳಿದನು.

ಕರ್ಪೂರಮಂಜರಿಯ ಹಸ್ತಸ್ಪರ್ಶದಿಂದ ಮಹಾರಾಜನ ಶರೀರ ರೋಮಾಂಚಿತವಾಯಿತು. ಕಪಿಂಜಲನ ಸೂಚನೆಯಂತೆ ಮಹಾರಾಜ ಅಗ್ನಿಪ್ರದಕ್ಷಿಣೆಯನ್ನು ಮಾಡಿದ. ವಿವಾಹದ ಕಾರ್ಯಗಳೆಲ್ಲ ಮುಗಿದ ನಂತರ, ಮಹಾರಾಣಿ ತನ್ನ ಪರಿವಾರದವರೊಂದಿಗೆ ಹೊರಟಳು. ವಿವಾಹದ ದಕ್ಷಿಣೆಯೆಂದು ಕಪಿಂಜಲನಿಗೆ ನೂರು ಗ್ರಾಮಗಳನ್ನು ಕೊಡಲಾಯಿತು.

" ನಿನ್ನ ಯಾವ ಇಚ್ಛೆಯನ್ನು ಪೂರ್ಣಮಾಡಲಿ " ಎಂದು ೖರವಾನಂದ ಕೇಳಿದನು.

"ಕುಂತಲ ದೇಶದ ರಾಜಪುತ್ರಿ ಕರ್ಪೂರಮಂಜರಿಯ ಕರಸ್ಪರ್ಶ ಂದ ಅತಿಶಯ ಆನಂದವಾಯಿತು. ಸ್ವರ್ಗವು ತುಚ್ಛವೆನಿಸತೊಡಗಿದೆ. ಕ್ರವರ್ತಿಯಾಗಿ ರಾಜ್ಯಭಾರ ಮಾಡತೊಡಗಿದ್ದೇನೆ. ಸಕಲ ಸಜ್ಜನ ೃಂದ ಸತ್ಯಭಾಷಣ ಮತ್ತು ಸದಾಚಾರದಿಂದ ಆನಂದವನ್ನು ಅನು- ವಿಸಲಿ. ದುಷ್ಟರು ಯಾವಾಗಲೂ ದುಃಖವನ್ನೇ ಅನುಭವಿಸುತ್ತಿರಲಿ. ಕಾಲದಲ್ಲಿ ಮಳೆಯಾಗಲಿ. ಜನತೆ ಲೋಭದಿಂದ ದೂರವಿರಲಿ ುತ್ತು ಅದಕ್ಕೆ ಧರ್ಮದಲ್ಲಿ ದೃಢವಾದ ವಿಶ್ವಾಸವಿರಲಿ " ಎಂದು ುಹಾರಾಜ ಭೈರವಾನಂದನೊಡನೆ ಬೇಡಿಕೊಂಡನು.